# ಅನುಬಂಧ

*

## ಅ. ನಿಜಲಿಂಗಶತಕದ ಕೆಲವು ಕಠಿಣ ಪದ್ಯಗಳ ಭಾವಾನುವಾದ

### ಪದ್ಯ : ಒಂದು

ಬ್ರಹ್ಮನಾರಾಯಣರಿಂದ ನಮಸ್ಕರಿಸಲ್ಪಟ್ಟ, ಕಣ್ಣುಗಳೇ ಕಿವಿಯಾಗಿರುವ, ಸರ್ಪಗಳನ್ನೇ ಭೂಷಣ ಮಾಡಿಕೊಂಡ, ಪರ್ವತರಾಜನ ಮಗಳಾದ ಪಾರ್ವತಿಗೆ ತನ್ನ ಅರ್ಧ ದೇಹವನ್ನು ನೀಡಿದ, ಭೂಮಿಯಲ್ಲಿ ಹುಟ್ಟಿದ ಚರಾಚರ ವಸ್ತುಗಳಿಗೆ ವೈರಿಯಾದ ಅಗ್ನಿಯನ್ನು ಕರದಲ್ಲಿ ಧರಿಸಿದ, ಪಕ್ಷಿಗಳಲ್ಲಿಯೇ ಶ್ರೇಷ್ಠವೆನಿಸಿದ ಗರುಡನನ್ನು ತನ್ನ ವಾಹನವನ್ನಾಗಿ ಮಾಡಿಕೊಂಡ ವಿಷ್ಣುವಿನ ಮಿತ್ರನಾದ, ಕಮಲದಲ್ಲಿ ಜನಿಸಿದ ಬ್ರಹ್ಮನ ಶಿರವನ್ನು ಕರೋಟಿಯನ್ನಾಗಿ ಮಾಡಿಕೊಂಡ, ದಿಕ್ಕುಗಳನ್ನೇ ಅಂಬರವನ್ನಾಗಿ ಮಾಡಿಕೊಂಡು ಪಂಚಮುಖಗಳಿಂದ ಶೋಭಿಸುವ, ಲಕ್ಷ್ಮೀಪುತ್ರನಾದ ಯಮನಿಗೆ ವೈರಿಯಾದ, ಕಣ್ಣು ಕಾಣಿಸದ ಅಂಧಕಾಸುರನನ್ನು ಶಿಕ್ಷಿಸಿದ, ಸಮುದ್ರನಾಥನ ಪ್ರೀತಿಯ ಸುತನಾದ ಚಂದ್ರನನ್ನು ಧರಿಸಿಕೊಂಡ, ಸೂರ್ಯ ಚಂದ್ರ ಅಗ್ನಿಗಳೆಂಬ ಮೂರು ಕಣ್ಣುಳ್ಳ, ಪಂಚಬಾಣಗಳನ್ನು ಧರಿಸಿದ ಕಾಮನನ್ನು ಸುಟ್ಟ, ಶರಣಜನರಿಗೆ ಇಷ್ಟಾರ್ಥವನ್ನು ಕೊಡುತ್ತಿರುವ, ಘನಮಹಿಮ ನಿಜಲಿಂಗನಿಗೆ ಉತ್ಕರ್ಷವಾಗಲಿ.



### ಪದ್ಯ : ಎರಡು

ಸುವರ್ಣಗರ್ಭನಾದ ಬ್ರಹ್ಮನ ಶಿರವನ್ನು ಹಸ್ತದಲ್ಲಿ ಧರಿಸಿದ, ನಾರಾಯಣನ ಮಗನಾದ ಮನ್ಮಥನ ದೇಹವನ್ನು ಸುಟ್ಟ, ವಿಷ್ಣು ಮೊದಲಾದ ದೇವತೆಗಳಿಂದ ಸ್ತುತಿಹೊಂದಿದ, ಕೋಟಿಸೂರ್ಯರ ಪ್ರಕಾಶವನ್ನು ಪಡೆದ, ವಿಷ್ಣುವಿನ ಗೆಳೆಯನಾದ, ಶುಭ್ರದೇಹಿಯಾದ, ಸರ್ಪಭೂಷಣನಾದ, ಯಮನನ್ನು ಸಂಹರಿಸಿದ, ಚಂದ್ರನನ್ನು ಧರಿಸಿದ, ಸುಖಕರನಾದ, ಹರಿಗೆ ಆಪ್ತನಾದ, ಗಣಪತಿಗೆ ಜನಕನಾದ, ಅಗ್ನಿಯನ್ನೇ ಕಣ್ಣು ಮಾಡಿಕೊಂಡ, ದಯಾಪೂರ್ಣನಾದ, ಗಂಗೆಯನ್ನು ಜಡೆಯಲ್ಲಿ ಧರಿಸಿದ, ಗಜಚರ್ಮವನ್ನು ಹೊದೆದ, ಕುದುರೆಯನ್ನೇರಿದ ಕುಬೇರನಿಗೆ ಮಿತ್ರನಾದ, ಶುಭ್ರ ಪ್ರಕಾಶವುಳ್ಳ ಚಂದ್ರನನ್ನು ಸೂಡಿದ ಶಿವನಿಗೆ ಜಯವಾಗಲಿ.

### ಪದ್ಯ : ಮೂರು

ಅಗಸ್ತ್ಯಮುನಿ ಮುಖ್ಯ ಸಕಲ ಮುನಿಗಳ ಸ್ತೋತ್ರಕ್ಕೆ ಸಂಪ್ರೀತನಾದ, ಕ್ಷೀರಸಾಗರದಲ್ಲಿ ಜನಿಸಿದ ಚಂದ್ರನನ್ನು ತಲೆಯ ಮೇಲೆ ಧರಿಸಿಕೊಂಡ, ಹುಟ್ಟುಸಾವಿನ ಭವದ ಪರ್ವತಕ್ಕೆ ವಜ್ರಾಯುಧವಾಗಿ ನಿಂತ, ನೀರಿನಲ್ಲಿ ಹುಟ್ಟಿದ ಕಮಲವನ್ನೇ ಕಣ್ಣಾಗಿ ಪಡೆದ ವಿಷ್ಣುವಿಗೆ ಮಿತ್ರನಾದ, ನಾರದನಿಂದ ಸ್ತುತಿಸಲ್ಪಟ್ಟ, ಚಂದ್ರನನ್ನೂ ಗಂಗೆಯನ್ನೂ ಜಟಾಪಟಲದಲ್ಲಿ ಧರಿಸಿಕೊಂಡ, ಹುಟ್ಟುಸಾವುಯಿಲ್ಲದೆ ಮೃತ್ಯುಂಜಯ ನೆನಿಸಿಕೊಂಡ, ಪಾರ್ವತಿಗೆ ಪ್ರಿಯನಾದ, ಕೀರ್ತಿಕಾಯನೆನಿಸಿದ, ಶುಭ್ರದೇಹಿಯಾದ, ಸಂಸಾರವನ್ನೇ ನೀಗಿದ, ಸದ್ಗುಣಸಾರನೆನಿಸಿದ, ಅಮೃತ ಚರಿತ್ರವುಳ್ಳ ಘನಮಹಿಮನಾದ ನಿಜಲಿಂಗಗೆ ಜಯವಾಗಲಿ.

### ಪದ್ಯ : ನಾಲ್ಕು

ಮಂಗಲಚರಿತನಾದ, ದಯೆಯಿಂದ ಕೂಡಿದ, ಶುಭ್ರದೇಹಿಯಾದ, ಉರಿಗಣ್ಣುಳ್ಳ, ಸರ್ಪಭೂಷಣನಾದ, ಯಮನನ್ನು ನಾಶಮಾಡಿದ, ಸರಸ್ವತಿಯ ವಲ್ಲಭನಾದ ಬ್ರಹ್ಮನ ಶಿರವನ್ನು ಕರದಲ್ಲಿ ಧರಿಸಿಕೊಂಡ, ಶಿವನೆಂದು ಖ್ಯಾತನಾದ, ಭಯಂಕರಾಕಾರವುಳ್ಳ, ಚಂದ್ರನನ್ನು ಧರಿಸಿದ, ಸರ್ವರಿಗೂ ಸುಖವನ್ನುಂಟುಮಾಡಿ ಶಂಕರನೆನಿಸಿಕೊಂಡ, ಶಚಿಯ ಗಂಡನಾದ ದೇವೇಂದ್ರನಿಂದ ಸ್ತುತಿಸಲ್ಪಟ್ಟ ಪಾದಗಳುಳ್ಳ, ಅನಂತಶಯನನೆನಿಸಿಕೊಂಡ ವಿಷ್ಣುವಿನ ಮಗನಾದ ಕಾಮನನ್ನು ಸುಟ್ಟ, ದೇವತೆಗಳೊಡನೆ ಜಗಳಮಾಡುತ್ತಿದ್ದ ತಾರಾಕಾಸುರನ ತ್ರಿಪುರಗಳನ್ನು ನಾಶಪಡಿಸಿದ, ವಿಷವನ್ನು ಕಂಠದಲ್ಲಿ ಧರಿಸಿದ, ಕೈಲಾಸವನ್ನೇ ತನ್ನ ಮಂದಿರವನ್ನಾಗಿ ಮಾಡಿಕೊಂಡ, ಕಾಲನಿಗೆ ಕಾಲನಾದ, ಪಾಪವೆಂಬ ಮದ್ದಾನೆಗೆ ಸಿಂಹಪ್ರಾಯನಾದ ಶಿವನಿಗೆ ಜಯವುಂಟಾಗಲಿ.

## ಪದ್ಯ : ಐದು

ಕೃಪಾಕರನಾದ, ಸಕಲಲೋಕಗಳಿಗೆ ಒಡೆಯನಾದ, ಬೆಳ್ಳಿಯ ಬೆಟ್ಟದಲ್ಲಿ ಮನೆ ಮಾಡಿಕೊಂಡ, ಸಮಸ್ತ ಭೂತಗಣಕ್ಕೆ ಸ್ವಾಮಿಯಾದ, ಪರ್ವತರಾಜನ ಮಗಳಾದ ಪಾರ್ವತಿಗೆ ಪತಿಯಾದ, ಆಕಾಶವನ್ನೇ ತನ್ನ ಕೇಶವನ್ನಾಗಿ ಮಾಡಿಕೊಂಡ, ದೈತ್ಯರ ಪುರಗಳನ್ನು ನಾಶಗೊಳಿಸಿದ, ದೋಷರಹಿತನಾಗಿ ಸರ್ಪಭೂಷಣನಾಗಿ ವಿಲಾಸದಿಂದ ಮೆರೆಯುವ, ಕಾಮನನ್ನು ಸುಟ್ಟುರುಹಿ ಬೂದಿಯನ್ನು ಬಳೆದುಕೊಂಡ, ಭಕ್ತರಿಗೆ ಉಲ್ಲಾಸನವನುಂಟುಮಾಡುವ, ಧವಳ ಶರೀರಿಯಾದ ಶಿವನು ಮಂಗಳಾಂಗನಾಗಿ ಮೆರೆಯಲಿ.

## ಪದ್ಯ : ಆರು

ನೋಡುವುದು ಕಣ್ಣು, ಕೇಳುವುದು ಕಿವಿ; ಆದರೆ ಕಣ್ಣನ್ನೇ ಕಿವಿಯನ್ನಾಗಿ ಮಾಡಿಕೊಂಡ ಸರ್ಪನಿಂದ ಈ ಭೂಮಿಯಲ್ಲಿ ಮಡಿದಾತನು ಪರೀಕ್ಷಿತರಾಜ; ಆತನ ತಂದೆ ಅಭಿಮನ್ಯು; ಅಭಿಮನ್ಯುವಿನ ತಂದೆ ಅರ್ಜುನ; ಅರ್ಜುನನ ಪಂತವನ್ನು ಗೆಲಿಸಿದವ ಕೃಷ್ಣಪರಮಾತ್ಮ. ಆತನ ಮಗನೇ ಕಾಮದೇವ; ಕಾಮನ ಬಾಣಕ್ಕೆ ಸಿಕ್ಕದೆ ಹೋದವನು ಬ್ರಹ್ಮಚಾರಿ ಹನುಮಂತ. ಆತನ ತಂದೆ ವಾಯುದೇವ. ಈ ವಾಯುದೇವನ ಇನ್ನೊಬ್ಬ ಮಗ ಭೀಮಸೇನ. ಭೀಮನೊಡನೆ ಹೋರಾಡಿ ಮಡಿದವನು ದುರ್ಯೋಧನ. ಆತನ ಗೆಳೆಯ ಕರ್ಣ. ಕರ್ಣನ ತಂದೆ ಸೂರ್ಯ. ಸೂರ್ಯನ ಕಿರಣಗಳಿಂದ ಅರಳುವ ಕಮಲಕ್ಕೆ ವೈರಿ ಚಂದ್ರ. ಅಂತಹ ಚಂದ್ರನನ್ನು ಧರಿಸಿದ ಶಿವನೇ ಸುಚರಿತ್ರ; ಆತನಿಗೆ ಜಯವಾಗಲಿ.

## ಪದ್ಯ : ಏಳು

ಧ್ವನಿಗೇಳುವುದು ಕಿವಿ; ಕಿವಿಯ ಪ್ರತಿನಾಮ ಕರ್ಣ; ಕರ್ಣನ ಜನಕ ಸೂರ್ಯ; ಯಮನು ಸೂರ್ಯಸುತ; ಯಮನ ಮಗ ಧರ್ಮರಾಜನೂ ಹೌದು. ಧರ್ಮಜನ ತಮ್ಮ ಭೀಮಸೇನ. ಭೀಮನ ತಂದೆ ವಾಯುದೇವ; ಆತನ ಮಗ ಹನುಮಂತ; ಹನುಮನಿಗೆ ಒಡೆಯ ಶ್ರೀರಾಮಚಂದ್ರ. ಆತನ ಸತಿ ಸೀತಾದೇವಿ. ಅವಳನ್ನು ಘನಗರ್ವದಿಂದ ಸೆರೆಮನೆಯಲ್ಲಿ ಇಟ್ಟವ ರಾವಣ. ರಾವಣನ ಅಣ್ಣ ಕುಬೇರ; ಕುಬೇರ ದಿಕ್ಕು ಉತ್ತರ. ಆ ದಿಕ್ಕಿನ ಹೆಸರನ್ನು ತಾಳಿದವ ಉತ್ತರಕುಮಾರ. ಈತನ ತಂಗಿ ಉತ್ತರೆ. ಉತ್ತರೆಯ ಅರಸ ಅಭಿಮನ್ಯು. ಅಭಿಮನ್ಯುವಿನ ಭಾವ ಮನ್ಮಥ; ಅನಿರುದ್ಧ ಮನ್ಮಥನ ಮಗ; ಅನಿರುದ್ಧನ ಸತಿ ಉಷಾದೇವಿ. ಉಷೆಯ ತಂದೆ ಬಾಣಾಸುರ; ಬಾಣನ ಪಿತ ವಿರೋಚನ; ಈತನ ತಂದೆ ಪ್ರಹ್ಲಾದ; ಪ್ರಹ್ಲಾದನ ತಂದೆ ಹಿರಣ್ಯಕಶ್ಯಪ; ಆತನ ತಂದೆ ಬ್ರಹ್ಮ. ಈ ಬ್ರಹ್ಮನ ತಲೆಯನ್ನು ಚಿವುಟಿ ಕೈಯಲ್ಲಿ ಧರಿಸಿದ ಶಿವನು ಭವವನ್ನೇ ಭಂಗಿಸಿದ ನಿಜಲಿಂಗ; ಆತನಿಗೆ ಮಂಗಳವಾಗಲಿ.



## ಪದ್ಯ : ಎಂಟು

ಪ್ರಥಮ ರಾಶಿ ಮೇಷ; ಮೇಷದ ಇನ್ನೊಂದು ಹೆಸರೇ ಟಗರು. ಅದನ್ನೇ ವಾಹನವನ್ನಾಗಿ ಮಾಡಿಕೊಂಡವ ಅಗ್ನಿ. ಅವನಿಗೆ ಶಾಪಕೊಟ್ಟವಳು ದಧೀಚಿಯ ಸತಿ. ಯಜ್ಞ ಮಾಡುತ್ತಿರುವಾಗ ದೇವೇಂದ್ರನು ಬ್ರಾಹ್ಮಣವೇಷ ಧರಿಸಿ ಬಂದು ದಧೀಚಿಯ ಶರೀರದೊಳಗಣ ಎಲುವನ್ನು ದಾನಬೇಡಿದ.(ಅದೇಕೆ ಬೇಕೆಂದು ಮುನಿ ಕೇಳಲು, ಇಂದ್ರನು "ಪರ್ವತಗಳ ರೆಕ್ಕೆಯನ್ನು ಕತ್ತರಿಸಲು ನಿನ್ನ ಬೆನ್ನೆಲುವನ್ನೇ ಬಾಣವನ್ನಾಗಿ ಮಾಡಿಕೊಂಡರೆ ಅದು ಸುಲಭ ಸಾಧ್ಯ" ವೆಂದು ಶಿವನು ನಿರೂಪಿಸಿದ್ದಾನೆ. ಆ ಕಾರಣಕ್ಕಾಗಿ ಕೊಡುಯೆಂದು ಬಿನ್ನವಿಸಿಕೊಂಡನು). ಪರೋಪಕಾರಕ್ಕಾಗಿ ದಧೀಚಿ ಪ್ರಾಣನೀಗಿದನು. ಅವನ ಎಲುವು ತೆಗೆದುಕೊಂಡು ದೇವೇಂದ್ರ ಹೋದ. ಆ ವೇಳೆಗೆ ದಧೀಚಿಯ ಮಡದಿ ಬಂದು "ತನ್ನ ಗಂಡ ಸಾಯಲು ಕಾರಣವೇನೆಂ"ದು ಅಗ್ನಿಯನ್ನು ಕೇಳಿದರೆ ಆತನು ಸುಮ್ಮನಾದನು. ಆಗ ದಧೀಚಿಯ ಸತಿ ಅಗ್ನಿಗೆ "ನೀನು ಸರ್ವಭಕ್ಷಕನಾಗು" ಎಂದು ಶಾಪಕೊಟ್ಟಳು. ದಧೀಚಿಯನ್ನು ನಿಜವಾಗಿ ಕೊಂದವನು ದೇವೇಂದ್ರ; ಆತನ ಮಿತ್ರ ನಾರಾಯಣ. ಅವನ ಧ್ಯಾನಮಾಡುತ್ತ ರಾಮನನ್ನು ದಶರಥ ಪಡೆದ. ರಾಮಚಂದ್ರನೇ ದಶರಥನ ಹಿರಿಯ ಮಗ; ಸೀತೆ ದಶರಥನ ಹಿರಿಯ ಸೊಸೆ. ಸೀತಾದೇವಿಯ ತಾಯಿ ಭೂದೇವಿ. ಭೂಮಿಯನ್ನು ಸತತವಾಗಿ ತನ್ನ ತಲೆಯ ಮೇಲೆ ಹೊತ್ತವನು ಆದಿಶೇಷ. ಅವನಿಗೆ ಶತ್ರು ಗರುಡ. ಗರುಡನಿಗೆ ಅಣ್ಣ ಅರುಣ. ಅರುಣನಿಗೆ ಸ್ವಾಮಿ ಸೂರ್ಯ; ಸೂರ್ಯನ ಮಗ ಸುಗ್ರೀವ. ಆತನಿಗೆ ಅಣ್ಣ ವಾಲಿ. ವಾಲಿಯನ್ನು ಬಾಣದಿಂದ ಹೊಡೆದು ಕೊಂದವ ಶ್ರೀರಾಮ; ಆತನ ಸ್ನೇಹಿತನೇ ಶಿವ. ಶಿವರೂಪಿಯಾದ ನಿಜಲಿಂಗ ಜಗಕ್ಕೆ ಜಯವನ್ನುಂಟುಮಾಡಲಿ.

## ಪದ್ಯ : ಒಂಬತ್ತು

ಭೂಸುರರಿಗೆ ದಾನವಾಗಿ ದೊರೆಯುವುದು ಕಾಂಚನ, ಸುವರ್ಣ. ಸುವರ್ಣದ ಹೆಸರಿನಿಂದ ಕರೆಯಿಸಿಕೊಳ್ಳುವ ದಿಕ್ಕು ದಕ್ಷಿಣ. ಆ ದಿಕ್ಕಿನ ಹೆಸರನ್ನೇ ಪಡೆದ ಸತಿ ದಾಕ್ಷಾಯಿಣಿ; ಅವಳ ತಂದೆ ದಕ್ಷಬ್ರಹ್ಮ. ಆತನ ಶಿರವನ್ನು ಚಂಡಾಡಿದವ ವೀರಭದ್ರ; ವೀರಭದ್ರನ ತಾಯಿ ಪಾರ್ವತಿ; ಅವಳ ಇನ್ನೊಬ್ಬ ಮಗ ವಿಘ್ನೇಶ್ವರ, ಆತನ ಹೊಟ್ಟೆಗೆ ಸುತ್ತಿಕೊಂಡಿರುವುದು ಸರ್ಪ, ಸರ್ಪಕ್ಕೆ ವೈರಿ ಗರುಡ, ಗರುಡನ ಪರಮ ಸತ್ವವನ್ನು ಮೆಚ್ಚಿಕೊಂಡು ಆತನಿಗೆ ಅಮೃತವನ್ನು ಕರುಣಿಸಿದವ ದೇವೇಂದ್ರ. ಆತನ ಮಗ ಅರ್ಜುನ, ಅರ್ಜುನನ ಸತಿ ಸುಭದ್ರೆ; ಅವಳ ಅಣ್ಣ ವಿಷ್ಣು. ಆತನ ಪಟ್ಟದ ಮಡದಿ ಲಕ್ಷ್ಮೀ, ಲಕ್ಷ್ಮಿಯ ಸಹೋದರ ಚಂದ್ರ, ಚಂದ್ರನ ಅಳಿಯ ಮನ್ಮಥ; ಮನ್ಮಥನನ್ನು ಕೊಂದವ ಶಿವ. ಅಂತಹ ಶಿವಸ್ವರೂಪಿಯಾದ ನಿಜಲಿಂಗನು ಜಯಹೊಂದಲಿ.

## ಪದ್ಯ : ಹತ್ತು

ಸಪ್ತನಾಲಗೆಗಳಿಂದ ರುಚಿನೋಡುವವ ಅಗ್ನಿ; ಆತನ ಸಖ ವಾಯು; ವಾಯುವಿನ ವಾಹನ ಚಿಗರೆ; ಚಿಗರೆಯನ್ನು ಧರಿಸಿಕೊಂಡವ ಚಂದ್ರ; ಚಂದ್ರನ ತಂದೆ ಅತ್ರಿ. ಆತನ ವಸನವನ್ನೇ ತನ್ನ ವಸ್ತ್ರವನ್ನಾಗಿ ಮಾಡಿಕೊಂಡವಳು ಭೂದೇವಿ; ಅವಳನ್ನು ಕದ್ದೊಯ್ದವನು ತಮಸಾಸುರ. ಆತನನ್ನು ಕೊಂದು ಭೂದೇವಿಯನ್ನು ಬಿಡುಗಡೆ ಮಾಡಿದವನು ನಾರಾಯಣ. ಆತನ ಅಯ್ಯ ವಸುದೇವ; ಅವನ ದೇಹಕ್ಕೆ ಸುವರ್ಣದ ಹೊಳಪು. ಆ ಹೆಸರಿನವನೇ ಸುವರ್ಣಗರ್ಭ–ಬ್ರಹ್ಮ, ಆತನ ತಮ್ಮ ಮನ್ಮಥ, ಮನ್ಮಥನು ಮತ್ಸ್ಯಪತಾಕ. ಈ ಹೆಸರಿನವಳು ಮತ್ಸ್ಯಗಂಧಿ, ಅವಳ ಗಂಡ ಶಂತನು ಚಕ್ರವರ್ತಿ. ಈ ಚಕ್ರವರ್ತಿಯ ಇನ್ನೊಬ್ಬ ಸತಿ ಸುಮಾಲಿನಿ; ಅವಳ ಮಗ ಚಿತ್ರವೀರ್ಯ. ಆತನ ಮೊಮ್ಮಗನೇ ಅರ್ಜುನ. ಅರ್ಜುನನ ತಪಸ್ಸಿಗೆ ಒಲಿದು ಪಾಶುಪತಾಸ್ತ್ರವನ್ನು ನೀಡಿದವನು ಭವರಹಿತನಾದ ಶಿವನು; ಆತನು ವಿಜಯಿಯಾಗಲಿ.

❖❖



## ಆ. ಕೆಲವು ಸಂದರ್ಭ ಕಥೆಗಳು

### ಬ್ರಹ್ಮನ ಶಿರಸ್ಸು ಹೋದ ಕಥೆ

ತಾನೇ ಸೃಷ್ಟಿಕರ್ತನೆಂದು ಹೇಳಿಕೊಂಡು ಗರ್ವಪಡತೊಡಗಿದ ಬ್ರಹ್ಮ. ದೇವಾನುದೇವತೆಗಳೆಲ್ಲ ತನ್ನ ಎದುರಿನಲ್ಲಿ ಕನಿಷ್ಠರೆಂದೇ ಅವನ ಭಾವನೆಯಾಗಿ ಬಿಟ್ಟಿತ್ತು. ಆಗ ವಿಷ್ಣು ಬ್ರಹ್ಮನನ್ನು ಕುರಿತು, "ಅಯ್ಯಾ ಬ್ರಹ್ಮನೇ, ನೀನು ಸೃಷ್ಟಿಕರ್ತ; ನಾನು ಸೃಷ್ಟಿಪಾಲಕ; ಮಹೇಶ್ವರನು ಸೃಷ್ಟಿಸಂಹಾರಕ. ಆದ್ದರಿಂದ ಶಿವನೇ ಸರ್ವೋತ್ತಮ" ಎಂದು ಬುದ್ಧಿವಾದ ಮಾಡಿದ. ಅದನ್ನು ಕೇಳಿ ಬ್ರಹ್ಮನು ಸಿಟ್ಟಿಗೆದ್ದು "ಶಿವನಿಗಿಂತ ನಾನೇತರಲ್ಲಿ ಕಡಿಮೆಯಾಗಿದ್ದೇನೆ? ಶಿವನಿಗೆ ಪಂಚಮುಖಗಳಿದ್ದರೆ ನನಗೂ ಪಂಚ ಮುಖಗಳಿವೆ" ಎಂದು ಹೇಳಿ ಶಿವನನ್ನು ಬಾಯಿಗೆ ಬಂದಂತೆ ಬೈದ. ತಾನೇ ಸೃಷ್ಟಿಕರ್ತನಾದುದರಿಂದ ತನ್ನ ಚತುರ್ಮುಖಗಳಿಗೆ ಇನ್ನೊಂದು ಮುಖವನ್ನು ನಿರ್ಮಿಸಿಕೊಂಡು ತಾನೂ ಪಂಚಮುಖನಾದ. ಆಗ ಶಿವನು ಸಿಟ್ಟಿಗೆದ್ದು ತನ್ನ ಎಡಗೈಯ್ಯ ಬೆರಳ ಉಗುರಿನಿಂದ ಬ್ರಹ್ಮನ ಪಂಚಮ ಶಿರವನ್ನು ಚಿವುಟಿದನು. ಬ್ರಹ್ಮನ ಅಹಂಕಾರ ಅಳಿಯಿತು. ಶಿವನ ಕೈಗೆ ಮಾತ್ರ ಬ್ರಹ್ಮನ ಶಿರವು ಅಂಟಿಕೊಂಡು ಬಿಟ್ಟಿದ್ದರಿಂದ ಆತ 'ಕರಶಿರ'ನೆನಿಸಿಕೊಂಡ. ಕೈಯಲ್ಲಿ ಕಪಾಲ ಬಂದುದರಿಂದ ಭಿಕ್ಷಾಟನೆಯೂ ಆತನಿಗೆ ಅನಿವಾರ್ಯವಾಯಿತು.

### ಕಾಮದಹನದ ಕಥೆ

ಶಿವನ ಅರ್ಧಾಂಗಿ ದಾಕ್ಷಾಯಣಿ ದಕ್ಷಬ್ರಹ್ಮನ ಯಜ್ಞ ಕುಂಡದಲ್ಲಿ ಬಿದ್ದು ಅಸುನೀಗಿ, ಪರ್ವತರಾಜನ ಉದರದಲ್ಲಿ ಪುನಃ ಜನಿಸಿ ಬಂದು ಪಾರ್ವತಿಯಾದಳು. ಶಿವನು ಮೊದಲೇ ವೈರಾಗ್ಯಮೂರ್ತಿ. ದಾಕ್ಷಾಯಣಿ ತೀರಿಕೊಂಡ ಮೇಲಂತೂ

ಪರಮ ವೈರಾಗ್ಯವನ್ನು ತಾಳಿ ಹೇಮಕೂಟ ಪರ್ವತದಲ್ಲಿ ತಪಶ್ಚರ್ಯಕ್ಕೆ ಕುಳಿತನು. ಪಾರ್ವತಿ ಬಾಲ್ಯದಿಂದಲೂ ಶಿವನನ್ನೇ ಪೂಜಿಸುತ್ತ ಶಿವನ ಕೈಹಿಡಿಯುವುದೇ ತನ್ನ ಚರಮಗುರಿಯೆಂದು ಬಗೆದು ಬೆಳೆದು ದೊಡ್ಡವಳಾದಳು. ಶಿವನನ್ನು ಒಲಿಸಿಕೊಳ್ಳಲೆಂದೇ ತಾನೂ ತಪವನ್ನಾಚರಿಸತೊಡಗಿದಳು. ಇತ್ತ ತಾರಕಾಸುರನು ದೇವಾನುದೇವತೆಗಳಿಗೆ ತೊಂದರೆ ಕೊಡತೊಡಗಿದ. ಅವನನ್ನು ಕೊಲ್ಲುವುದು ಅಸಾಧ್ಯವೆನಿಸಿತು. ಅವನ ಮರಣ ಶಿವಶಿವೆಯರ ಉದರದಲ್ಲಿ ಜನಿಸಿದ ಕುಮಾರನ ಕೈಯಲ್ಲಿದೆಯೆಂಬುದನ್ನು ವಿಷ್ಣು ಮೊದಲಾದ ದೇವಾನುದೇವತೆಗಳು ಅರಿತುಕೊಂಡರು. ಶಿವಪಾರ್ವತಿಯರ ಸಂಗದಿಂದಲೇ ಕುಮಾರ ಜನಿಸಬೇಕು. ಅದಕ್ಕಾಗಿ ಅವರು ಕಾಮನನ್ನು ಮನದುಂಬಿಸಿ ಶಿವನ ಮೇಲೆ ಬಾಣವನ್ನೆಸೆಯಲು ಹುರಿದುಂಬಿಸಿದರು. ಕಾಮನು ತನ್ನಲ್ಲಿರುವ ಪಂಚಬಾಣಗಳನ್ನು ತೊಟ್ಟು ಶಿವನ ಮೇಲೆ ಏರಿಹೋದನು. ಶಿವನು ಸಮಾಧಿಯನ್ನು ಬಿಟ್ಟು ತನ್ನ ಉರಿಗಣ್ಣನ್ನು ತೆರೆಯಲು ಕಾಮನ ದೇಹ ಸುಟ್ಟು ಬೂದಿಯಾಗುವುದು. ಅಂದಿನಿಂದ ಶಿವನು ಮನೋಜಹರನೆಂದು ಮೆರೆಯುತ್ತಲಿದ್ದಾನೆ.

### ಸತ್ಯಹರಿಶ್ಚಂದ್ರ

ದೇವೇಂದ್ರನ ಒಡ್ಡೋಲಗದಲ್ಲಿ ವಶಿಷ್ಠ ವಿಶ್ವಾಮಿತ್ರರು ಕುಳಿತುಕೊಂಡಾಗ ಮಾತಿಗೆ ಮಾತು ಹೊರಟು ಭೂಲೋಕದಲ್ಲಿ ಸತ್ಯವಂತನು ಯಾರೆಂಬ ಪ್ರಶ್ನೆ ಬರುತ್ತದೆ. ವಶಿಷ್ಠನು 'ಹರಿಶ್ಚಂದ್ರನಂತಹ ಸತ್ಯವಂತ' ಎಲ್ಲಿಯೂ ಇಲ್ಲವೆನ್ನುತ್ತಾನೆ. ವಿಶ್ವಾಮಿತ್ರನು ಅಲ್ಲಗಳೆಯುತ್ತಾನೆ. ಅವನು ಸತ್ಯವಂತನಲ್ಲವೆಂದು ಸಿದ್ಧಗೊಳಿಸಿದರೆ ತನ್ನ ತಪಶ್ಚರ್ಯದ ಫಲವನ್ನು ನೀಗಿ ನರಕಕ್ಕೆ ಹೋಗುವದಾಗಿ ವಶಿಷ್ಠ ಹೇಳುತ್ತಾನೆ. ಹರಿಶ್ಚಂದ್ರನಿಂದ ಸುಳ್ಳು ಹೇಳಿಸದಿದ್ದರೆ 'ತಾನು ವಿಶ್ವಾಮಿತ್ರನೇ ಅಲ್ಲ' ವೆಂದು ಹೇಳಿ ಸಭಾತ್ಯಾಗ ಮಾಡುತ್ತಾನೆ ವಿಶ್ವಾಮಿತ್ರ.

ಇನ್ನು ಮುಂದೆ ಹರಿಶ್ಚಂದ್ರನನ್ನು ಕಾಡಿಬೇಡಿ ಆತನನ್ನು ಅಸತ್ಯವಂತನನ್ನಾಗಿ ಮಾಡುವುದೇ ವಿಶ್ವಾಮಿತ್ರನ ಕಾಯಕವಾಯಿತು. ಯಜ್ಞ ಕಾರ್ಯಕ್ಕೆಂದು ಅಗಣಿತ ದ್ರವ್ಯವನ್ನು ಹರಿಶ್ಚಂದ್ರನಿಂದ ಪಡೆದು ಅವನಲ್ಲಿಯೇ ಬಿಡುವನು. ಕಾಡುಮೃಗಗಳನ್ನು ಸೃಷ್ಟಿಮಾಡಿ, ಬೇಟೆಯ ನೆಪದಿಂದ ಹರಿಶ್ಚಂದ್ರನನ್ನು ಅರಣ್ಯದಲ್ಲಿ ನಿಲ್ಲಿಸುತ್ತಾನೆ. ತನ್ನ ಪ್ರೀತಿಯ ಮಕ್ಕಳಾದ ಹೊಲತಿಯರನ್ನು ಕಳಿಸಿ ಹರಿಶ್ಚಂದ್ರನೊಡನೆ ಮದುವೆಯಾಗೆಂದು ಅವರಿಗೆ ಪ್ರೇರೇಪಿಸುತ್ತಾನೆ. ಆಡಿದ ಮಾತನ್ನೇ ಹಿಡಿದು ಆತನ ರಾಜ್ಯವನ್ನು ಅಪಹರಿಸುತ್ತಾನೆ. ಮೊದಲು ತಾ ಬಿಟ್ಟ ದಕ್ಷಿಣೆಯ ದುಡ್ಡು ಕೊಡುಯೆಂದು ದುಂಬಾಲು ಬೀಳುತ್ತಾನೆ. ಹಣಪಡೆಯಲು ನಕ್ಷತ್ರಕನನ್ನು ನಿಯಮಿಸುತ್ತಾನೆ. ಅವನು ಕೊಟ್ಟ ತೊಂದರೆಗಳು ಸಹಿಸಲಸದಳವಾದುವು. ಹರಿಶ್ಚಂದ್ರನು ತನ್ನ ಸತ್ಯರಕ್ಷಣೆಗಾಗಿ ತನ್ನ ಮಡದಿ ಮಗನನ್ನು ಒತ್ತೆಯಿಟ್ಟು, ಚಾಂಡಾಲನಿಗೆ ತನ್ನನ್ನೇ ಮಾರಿಕೊಂಡು ವಿಶ್ವಾಮಿತ್ರನ ಸಾಲವನ್ನು ತೀರಿಸುತ್ತಾನೆ. ಮಗು ಲೋಹಿತಾಶ್ವನು ಹಾವು ಕಡಿದು ಸಾಯಲು ಚಂದ್ರಮತಿಗೆ ಬಂದ ದುಃಖ ವರ್ಣನೆಗೆ ನಿಲುಕುದುದು. ಕೊನೆಗೆ ವಿಧಿ ವಿಕಟಾಟ್ಟಹಾಸದಿಂದ ನಗುತ್ತದೆ. ಅಂತ್ಯದಲ್ಲಿ ಚಂದ್ರಮತಿಯ ರುಂಡವನ್ನು ಹಾರಿಸುವ ಕಾರ್ಯ ಹರಿಶ್ಚಂದ್ರನ ಪಾಲಿಗೆ ಬರುವದು. ಸತ್ಯಸಂಧನಾದ ಹರಿಶ್ಚಂದ್ರ ಯಾವುದಕ್ಕೂ ಮಣಿಯಲಿಲ್ಲ. ಕೊನೆಗೆ ಅವನ ಸತ್ಯಕ್ಕೆ ಮೆಚ್ಚಿ ಶಿವನೇ ಪ್ರತ್ಯಕ್ಷನಾದ. 'ಹರನೆಂಬುದೇ ಸತ್ಯ; ಸತ್ಯವೆಂಬುದೇ ಹರ'–ಎಂಬೀ ಮಾತು ದಿಟವೆನಿಸಿತು.

### ಗರುಡನಿಗೆ ಅಮೃತ ದೊರೆತ ಕಥೆ

ಕಶ್ಯಪ ಋಷಿಗೆ ಕದ್ರು, ವಿನತೆ ಎಂಬ ಇಬ್ಬರು ಹೆಂಡಿರು. ಕದ್ರುವಿನ ಉದರದಲ್ಲಿ ಸರ್ಪಗಳು ಹುಟ್ಟಿದುವು; ವಿನತೆಯ ಉದರದಲ್ಲಿ ಗರುಡ ಜನಿಸಿದನು. ಒಮ್ಮೆ ಕದ್ರು ವಿನತೆಯರು ವಿಹಾರಕ್ಕಾಗಿ ಹೊರಟಾಗ ಇಂದ್ರನ ಕುದುರೆ ಬೆಳ್ಳಗಿದೆಯೋ ಸ್ವಲ್ಪಾದರೂ ಕಪ್ಪು ಅದಕ್ಕುಂಟೋ? ಎಂಬ ವಾದವಿವಾದ ನಡೆಯಿತು. ಅದು ಸ್ವಲ್ಪಾದರೂ ಕಪ್ಪಿದ್ದರೆ ತಾನು ಕದ್ರುವಿನ ದಾಸಿಯಾಗುವದಾಗಿ ವಿನತೆ ಹೇಳಿದಳು. ಕುದುರೆಯನ್ನು ಪ್ರತ್ಯಕ್ಷವಾಗಿ ಅವರಿಬ್ಬರೂ ಕಂಡರು. ಕದ್ರುವಿನ ಅಪ್ಪಣೆಯಂತೆ ಅವಳ ಸರ್ಪಶಿಶುಗಳು ಕುದುರೆಯ ಬಾಲಕ್ಕೆ ಮೆತ್ತಿಕೊಂಡದ್ದರಿಂದ ಬಾಲ ಕರ‍್ರಗೆ ಕಾಣಿಸಿತು. ಕದ್ರು ಗೆದ್ದಳು; ವಿನತೆ ಗೆದ್ದವಳಿಗೆ ದಾಸಿಯಾಗಬೇಕಾಯಿತು.

ಗರುಡನು ತನ್ನ ತಾಯಿಗೆ ಬಂದ ದಾಸ್ಯವನ್ನು ಕಂಡು ಮಮ್ಮಲನೆ ಮರುಗಿದನು. ಅವಳ ಬಂಧವಿಮೋಚನೆಗೆ ಒಂದೇ ತಾರಕ ಮಂತ್ರ–ಇಂದ್ರಲೋಕದಿಂದ ಅಮೃತವನ್ನು ತರಬೇಕು. ಅದಕ್ಕಾಗಿ ಗರುಡನು ಇಂದ್ರನೊಡನೆ ನಿಖರವಾಗಿ ಹೋರಾಡಿದನು; ದೇವತೆಗಳನ್ನೆಲ್ಲ ಗೆದ್ದು ಅಮೃತವನ್ನು ತಂದು ತನ್ನ ಮಲತಾಯಿಯಾದ ಕದ್ರುವಿಗೆ ಕೊಟ್ಟು, ತನ್ನ ತಾಯಿಯನ್ನು ಬಂಧನದಿಂದ ಬಿಡಿಸಿದ ಗರುಡ.

### ಬಲಿಚಕ್ರವರ್ತಿಯ ಕಥೆ

ಪ್ರಹ್ಲಾದನ ಮೊಮ್ಮಗ ಬಲಿಚಕ್ರವರ್ತಿ. ಆತನು ತನ್ನ ಪರಾಕ್ರಮದಿಂದ ಮೂರು ಲೋಕಗಳನ್ನು ಜಯಿಸಿ, ತನಗೆ ಯಾರೂ ಸಮಾನರಿಲ್ಲೆಂದು ಭಾವಿಸಿ, ನರ್ಮದಾ ತೀರದಲ್ಲಿ ಅಶ್ವಮೇಧ ಯಜ್ಞವನ್ನು ಪ್ರಾರಂಭಿಸಿದನು. ಅವನ ಸೊಕ್ಕು ಮಿತಿಮೀರಿತೆಂದು ತಿಳಿದು, ವಿಷ್ಣು ವಾಮನನಾಗಿ ಅವನಿದ್ದಲ್ಲಿಗೆ ಬಂದು ಮೂರಡಿ ಭೂಮಿಯನ್ನು ದಾನವಾಗಿ ಬೇಡಿದನು. ಬಲಿ ಒಪ್ಪಿಕೊಂಡು ದಾನಗೈಯಲು ಸಿದ್ಧನಾದ. ವಿಷ್ಣುವಿನ ಒಂದು ಪಾದಕ್ಕೆ ಭೂಮಿ ಸಮವಾಯಿತು; ಇನ್ನೊಂದು ಪಾದಕ್ಕೆ ಆಕಾಶ ಆಹುತಿಯಾಯಿತು. ಮುಂದೇನು ಗತಿ? ಈ ಅನಾಹುತವನ್ನು ತಪ್ಪಿಸಲು ಶುಕ್ರಾಚಾರ್ಯರು ಧಾರಾಪಾತ್ರೆಯ ನಾಳದಲ್ಲಿ ಸೇರಿದರು. ನೀರು ಕಟ್ಟಾಯಿತು.

ವಾಮನನು ದರ್ಭೆಯಿಂದ ನಾಳದಲ್ಲಿ ಚುಚ್ಚಲು ಶುಕ್ರಾಚಾರ್ಯರ ಒಂದು ಕಣ್ಣೇ ಕುರುಡಾಯಿತು. ಬಲಿಗೆ ಮುಂದೇನೆಂಬುದೆ ತಿಳಿಯಲಿಲ್ಲ. ಆಗ ವಾಮನನು ತನ್ನ ಮೂರನೆಯ ಪಾದನ್ನು ಬಲಿಚಕ್ರವರ್ತಿಯ ತಲೆಯ ಮೇಲಿಟ್ಟು ಅದುಮಿದನು; ಬಲಿಗೆ ಪಾತಾಳವೇ ಗತಿಯಾಯಿತು.

## ನಳಚಕ್ರವರ್ತಿಯ ಕಥೆ

ನಳನು ನಿಷಧ ದೇಶದ ದೊರೆ; ಅವನ ಮಡದಿ ದಮಯಂತಿ. ಅವರೀರ್ವರೂ ಪುತ್ರ ಸಂತಾನರಾಗಿ ಸಂತೃಪ್ತರಾಗಿ ಸುಖದಿಂದ ಇದ್ದರು. ನಳನ ದಾಯಾದಿಯಾದ ಪುಷ್ಕರನು ನಳನನ್ನು ಜೂಜಿನಲ್ಲಿ ಸೋಲಿಸಿ, ಅವನ ರಾಜ್ಯವನ್ನೆಲ್ಲ ಕಿತ್ತುಕೊಂಡು, ಉಟ್ಟಬಟ್ಟೆಯ ಮೇಲೆ ನಳದಮಯಂತಿಯರನ್ನು ಅಡವಿಗೆ ಅಟ್ಟಿದನು. ಅವರು ವನವಾಸದಲ್ಲಿದ್ದು ಪಡಬಾರದ ಕಷ್ಟಗಳನ್ನು ಅನುಭವಿಸಿದರು. ದಮಯಂತಿ ತವರುಮನೆಗೆ ಹೋದರೆ ಉಚಿತವೆಂದು ನಳನ ವಿಚಾರ; ಪತಿಯ ಸಾನ್ನಿಧ್ಯದಲ್ಲಿಯೇ ತವರುಮನೆಯ ಸುಖವಿದೆಯೆಂದು ಅವಳ ವಾದ. ನಳನಿಗೆ ದಿಕ್ಕುತೋಚದಾಯಿತು; ಬುದ್ಧಿ ಓಡದಾಯಿತು. ಹೆಂಡತಿಗೆ ಹೇಳದೆ ಓಡಿಹೋದನು. ಮಲಗಿದ ದಮಯಂತಿ ನಿದ್ರೆ ತಿಳಿದು ಎದ್ದು ನೋಡುತ್ತಾಳೆ; ತನ್ನ ಗಂಡ ಅಲ್ಲಿದ್ದಿಲ್ಲ; ಹುಡುಕಿದರೂ ಸಿಗಲಿಲ್ಲ. ಮಾರ್ಗಕಾರರ ಸಹಾಯದಿಂದ ತನ್ನ ತಂದೆಯಾದ ಭೀಮಭೂಪಾಲನಿದ್ದಲ್ಲಿಗೆ ಬಂದಳು. ತವರುಮನೆಯಲ್ಲಿದ್ದುಕೊಂಡು ಪತಿಯ ಧ್ಯಾನದಲ್ಲಿ ಕಾಲ ನೂಕಿದಳು. ಭೀಮಭೂಪಾಲ ನಳನನ್ನು ಹುಡುಕಲು ಚಾರರನ್ನು ಕಳಿಸಿದನು.

ಇತ್ತ ನಳನು ಅಡವಿಯಲ್ಲಿ ಹೋಗುತ್ತಿದ್ದಾಗ ಕರ್ಕೋಟಕ ಎಂಬ ಹೆಸರಿನ ಸರ್ಪ ಆತನನ್ನು ಕಚ್ಚಿತು; ಅದರ ವಿಷದಿಂದ ಅವನ ದೇಹ ಕಪ್ಪಾಯಿತು. "ಆದುದು ಒಳ್ಳೆಯದೇ ಆಯಿತು; ಬಣ್ಣ ಬದಲಾದುದು ಕಳೆದುಕೊಂಡದ್ದನ್ನು ಪಡೆಯಲು ಸಹಾಯ ಮಾಡಬಹುದು" ಎಂದುಕೊಂಡು ಅಯೋಧ್ಯೆಗೆ ಬಂದು ಋತುಪರ್ಣನ ಅರಮನೆಯಲ್ಲಿ ಅಶ್ವದ ಜೀತದಾಳಾಗಿ ನಿಂತನು; ಜೂಜುವಿದ್ಯೆಯನ್ನು ಕಲಿಯತೊಡಗಿದನು. ಇದು ದಮಯಂತಿಗೆ ಚಾರರಿಂದ ತಿಳಿದುಬಂತು. ಚತುರಮತಿಯಾದ ಅವಳು ನಳನನ್ನು ಗುರುತಿಸುವಲ್ಲಿ ಅನೇಕ ಉಪಾಯಗಳನ್ನು ಹೂಡಿದಳು. ನಳನ ಗುರುತು ಹೇಗೆ ಹತ್ತಬೇಕು? ಸೌಂದರ್ಯ ಕಳೆದುಕೊಂಡು ಕುರೂಪಿಯಾಗಿದ್ದ ಅವನನ್ನು ಗುರುತು ಹಿಡಿಯುವಷ್ಟರಲ್ಲಿಯೇ ನಳನು ಕರ್ಕೋಟಕನನ್ನು ಸ್ಮರಿಸಿಬಿಟ್ಟನು. ಮೊದಲಿನ ರೂಪ ಪುನಃ ಬಂದುಬಿಟ್ಟಿತು. ಆಗ ಆತನು ದಮಯಂತಿ ಇದ್ದಲ್ಲಿಗೆ ಬಂದು ಸರ್ವರಿಗೂ ಹರ್ಷ ತಂದುಕೊಟ್ಟನು. ಈಗಾಗಲೇ ಪಗಡೆಯಾಟದಲ್ಲಿ ಪರಿಣತಿ ಪಡೆದಿದ್ದ ನಳನು ಪುಷ್ಕರನೊಡನೆ ಪುನಃ ಜೂಜಾಡಿ ಕಳೆದುಕೊಂಡ ರಾಜ್ಯವನ್ನು ಮರಳಿ ಪಡೆದನು; ಸುಖದಿಂದ ಹೆಂಡಿರುಮಕ್ಕಳೊಡನೆ ರಾಜ್ಯಭಾರ ಮಾಡಿದನು.



## ತ್ರಿಪುರ ಸಂಹಾರ

ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ–ಇವರು ತಾರಕಾಸುರನ ಮಕ್ಕಳು.ದೇವತೆಗಳು ತಾರಕಾಸುರನನ್ನು ಕೊಲ್ಲಲು ಇವರು ರೊಚ್ಚಿಗೆದ್ದು ಬ್ರಹ್ಮನನ್ನು ಕುರಿತು ತಪಶ್ಚರ್ಯ ಮಾಡಿ, ಆತನ ವರದಿಂದ ತ್ರಿಪುರಗಳನ್ನು ಪಡೆದರು; ದೇವತೆಗಳನ್ನು ಪೀಡಿಸತೊಡಗಿದರು. ಆ ಮೂರು ಪುರಗಳು ಒಂದೆಡೆ ಸೇರಿದಾಗಲೇ ನಾಶವಾಗುವವೆಂದು ಬ್ರಹ್ಮನು ವರಕೊಟ್ಟಾಗಲೇ ತಿಳಿಸಿದ್ದನು. ಆದರೆ ಅವು ಒಂದುಗೂಡುವದೆಂತು? ದೇವಾನುದೇವತೆಗಳು ಓಡಿಬಂದು ಶಿವನಲ್ಲಿ ಮೊರೆಯಿಟ್ಟರು. ಕಾಲ ಕೂಡಿ ಬಂತು; ಶಿವನು ಭೂಮಿಯನ್ನೇ ರಥ ಮಾಡಿಕೊಂಡು ವಿಷ್ಣುವನ್ನೇ ಬಾಣವಾಗಿ ಧರಿಸಿ ತ್ರಿಪುರ ಸಂಹಾರ ಮಾಡಿದನು. ಲೋಕಕ್ಕೆಲ್ಲ ಕಲ್ಯಾಣವಾಯಿತು.

## ಶ್ರೀಕೃಷ್ಣನ ಕೊನೆ

ಶ್ರೀಕೃಷ್ಣ ಬಲರಾಮರು ಯಾದವ ವಂಶದಲ್ಲಿಯೇ ಹೆಚ್ಚು ಪ್ರಸಿದ್ಧಿಯನ್ನು ಪಡೆದವರು. ಕೊನೆಕೊನೆಗೆ ಯಾದವರಲ್ಲಿ ಒಳಜಗಳಗಳು ಹೆಚ್ಚಾದವು. ಆ ಮನೆತನಕ್ಕೆ ಮುನಿಗಳ ಶಾಪವೂ ಕಾಡತೊಡಗಿತು. ವಿಧಿಯ ಲೀಲೆಯನ್ನು ಮೀರುವದೆಂತು? ಮುನಿಗಳ ಶಾಪಕ್ಕೆ ಉಶ್ಶಾಪವೆಲ್ಲಿ? ಯಾದವರೆಲ್ಲರೂ ಮದಾಂಧರಾಗಿ ತಮ್ಮವರನ್ನೇ ತಾವು ಕೊಲ್ಲಲು ಸಿದ್ಧರಾದರು. ಇದನ್ನು ನೋಡಿ ಸಹಿಸದ ಬಲರಾಮನು ಸರ್ಪಶರೀರಿಯಾಗಿ ಯೋಗಾರೂಢನಾಗಿ ಸಮುದ್ರ ಪ್ರವೇಶ ಮಾಡಿದನು. ಶ್ರೀಕೃಷ್ಣನು ಒಂದು ಅರಳಿಯ ಮರದ ಬುಡದಲ್ಲಿ ಸಮಾಧಿಗೆ ಕೂತನು. ಅಷ್ಟರಲ್ಲಿಯೇ ಜರನೆಂಬ ಬೇಡನು ಕೃಷ್ಣನನ್ನು ಮೃಗವೆಂದು ಭಾವಿಸಿ ಬಾಣ ಬಿಟ್ಟನು. ದೇವರದೇವನು ಅಕಾಲ ಮರಣಕ್ಕೆ ತುತ್ತಾದನು. ಮರಣ ಮಹಾಮಹಿಮರಿಗೂ ಬಿಟ್ಟಿಲ್ಲ.

## ಚಂದ್ರ ಕ್ಷಯರೋಗಿಯೇ?

ಬೃಹಸ್ಪತಿಗೆ ತಾರೆಯೆಂಬ ಸುಂದರ ಹೆಂಡತಿ. ಅವಳು ಚಂದ್ರನ ಸೌಂದರ್ಯಕ್ಕೆ ಮರುಳಾಗಿ ಮನೆಯ ಗಂಡನನ್ನು ಮರೆತು ಚಂದ್ರನನ್ನು ಕೂಡಿಕೊಂಡಳು. ಬೃಹಸ್ಪತಿ ತನ್ನ ಹೆಂಡತಿಯನ್ನು ಮರ್ಯಾದೆ ಪೂರ್ವಕ ಮರಳಿ ಕಳಿಸಿಕೊಡಬೇಕೆಂದು ಚಂದ್ರನಲ್ಲಿ ಕೇಳಿಕೊಂಡನು. ಚಂದ್ರನು ಪಿಟ್ಟೆನ್ನಲಿಲ್ಲ. ಸಿಟ್ಟಿಗೆದ್ದ ಬೃಹಸ್ಪತಿಯು 'ನಿನಗೆ ಕ್ಷಯರೋಗ ಬರಲಿ' ಎಂದು ಶಾಪವಿತ್ತನು. ದೇವತೆಗಳು ಚಂದ್ರನಿಗೆ ಬುದ್ಧಿ ಹೇಳಿ ತಾರೆಯನ್ನು ಬೃಹಸ್ಪತಿಯಲ್ಲಿಗೆ ಕಳಿಸಿದರು. ಅಂದಿನಿಂದ ಚಂದ್ರನಿಗೆ ವೃದ್ಧಿಹಾನಿ ಸಮಾನವೆಂಬಂತೆ ಕೃಷ್ಣಪಕ್ಷದಲ್ಲಿ ಕುಗ್ಗಿ ಶುಕ್ಲಪಕ್ಷದಲ್ಲಿ ಹಿಗ್ಗುವುದು ನಡೆದಿದೆ. ಪರಸ್ತ್ರೀ ವ್ಯಾಮೋಹಿಗಳಿಗೆ ಇದು ತಪ್ಪಿದ್ದಲ್ಲ.

## ನಾರದ ಗರ್ವಭಂಗ

ನಾರದನು ಶ್ರೀ ವಿಷ್ಣುವಿನ ಮಹಾಭಕ್ತ; ಒಮ್ಮೆ ಪರಸ್ಪರವಾಗಿ ಚರ್ಚೆ ಮಾಡುತ್ತಿದ್ದಾಗ ಮಾಯೆಯ ವಿಷಯ ಹೊರಟಿತು. ಮಾಯೆಯನ್ನು ಗೆದೆಯುವುದು ಯಾರಿಂದಲೂ ಸಾಧ್ಯವಿಲ್ಲವೆಂದು ವಿಷ್ಣು ಹೇಳಿದ; ಅದಕ್ಕೊಪ್ಪದೆ ನಾರದನು "ಜ್ಞಾನಿಗೆ ಮಾಯಾವರಣವುಂಟೆ? ನನ್ನ ಮುಂದೆ ಮಾಯೆ ನಿಲ್ಲದು" ಎಂದು ವಾದಿಸಿದನು. ನಾರದನ ಈ ಗರ್ವವನ್ನು ಮುರಿಯಬೇಕೆಂದು ವಿಷ್ಣು ಒಂದು ಹಂಚಿಕೆ ಹಾಕಿ, ನಾರದನನ್ನು ಮಹಾ ಅರಣ್ಯದಲ್ಲಿರುವ ಒಂದು ಸರೋವರಕ್ಕೆ ಕರೆದುಕೊಂಡು ಹೋದನು. ಆಗಲೇ ಮಧ್ಯಾಹ್ನವಾಗಿತ್ತು. ವಿಷ್ಣುಭಕ್ತನಾದ ನಾರದನು ಸ್ನಾನ ಆಹ್ನಿಕಗಳನ್ನು ತೀರಿಸಿಕೊಂಡು ಮುಂದೆ ಸಾಗೋಣವೆಂದು ಹೇಳಿ ಸರೋವರದಲ್ಲಿ ಸ್ನಾನಕ್ಕೆ ಇಳಿದನು. ವಿಷ್ಣು ಮಾತ್ರ ದಂಡೆಯಲ್ಲಿಯೇ ನಿಂತನು. ನಾರದನು ಒಂದು ಸಲ ಮುಳುಗು ಹಾಕಿ ಮೇಲೆ ಏಳುವಷ್ಟರಲ್ಲಿ ವಿಷ್ಣು ನಾರದನ ದಂಡಕಮಂಡಲುಗಳನ್ನು ತೆಗೆದುಕೊಂಡು ಮಾಯವಾಗಿಬಿಟ್ಟನು. ಮತ್ತೊಮ್ಮೆ ಮುಳುಗು ಹಾಕುವುದೇ ತಡ– ನಾರದ ಸುಂದರ ನಾರೀಮಣಿಯಾಗಿ ಬಿಟ್ಟಿದ್ದ. ಹಿಂದಿನ ಸ್ಮರಣೆ ಏನು ಉಳಿದಿದ್ದಿಲ್ಲ. ಸ್ತ್ರೀಯಾಗಿ ನಾಚುತ್ತ ದಂಡೆಗೆ ಬಂದು ನಾರದ ನಿಂತುಕೊಂಡ. ಸ್ತ್ರೀ ಜಾತಿಗೆ ಬೇಕಾದ ಸ್ವಭಾವ ಅವನಲ್ಲಿ ತೋರತೊಡಗಿತು. ಅಬಲೆಗೆ ಭಯವೇ ಆಧಾರ. ನಾರದ ಗಳಗಳನೆ ಅಳತೊಡಗಿದನು.

ಅಷ್ಟರಲ್ಲಿಯೇ ಕಾಡಿನಲ್ಲಿ ಬೇಟೆಯಾಡಲು ಬಂದಿದ್ದ ತಾಲಧ್ವಜನೆಂಬ ರಾಜನು ನಾರದೀಯ ಸೌಂದರ್ಯವನ್ನು ಕಂಡು ಮರುಳಾದನು. ಅವಳನ್ನು ಕರೆದುಕೊಂಡು ತನ್ನ ರಾಜಧಾನಿಗೆ ತೆರಳಿದನು. ಸಂಸಾರಿಗಳಾದ ಆ ದಂಪತಿಗಳ ಉದರದಲ್ಲಿ ೬೦ ಮಕ್ಕಳು ಜನಿಸಿದರು. ಅವರಿಗಿಟ್ಟ ಹೆಸರುಗಳೇ ಸಂವತ್ಸರಗಳಾದವು. ತಾಲಧ್ವಜನು ಸಂಸಾರಲಂಪಟನಾದುದನ್ನು ಕಂಡು ಅರಿರಾಜರು ದಂಡೆತ್ತಿ ಬಂದರು. ತಾಲಧ್ವಜನ ಸೈನ್ಯ ಸೋತುಹೋಯಿತು. ಆತನ ಎಲ್ಲ ಮಕ್ಕಳೂ ಹೋರಾಡಿ ರಣರಂಗದಲ್ಲಿ ಮಡಿದರು. ದೊರೆಗೂ ಸ್ತ್ರೀ ನಾರದನಿಗೂ ಅತೀವ ದುಃಖವುಂಟಾಯಿತು. ಆ ಸಂದರ್ಭದಲ್ಲಿ ವಿಷ್ಣು ಬ್ರಾಹ್ಮಣವೇಷದಲ್ಲಿ ಬಂದು ರಾಜನಿಗೆ ಸಮಾಧಾನ ಹೇಳಿ ಮಹಾರಾಣಿಯನ್ನು ತೀರ್ಥದರ್ಶನಕ್ಕೆ ಕರೆದೊಯ್ದನು. ಬ್ರಾಹ್ಮಣನ ಹೇಳಿಕೆಯಂತೆ ಸ್ತ್ರೀ ನಾರದ ತೀರ್ಥದಲ್ಲಿ ಮುಳುಗಿ ಏಳುವಷ್ಟರಲ್ಲಿ ಮೊದಲಿನ ನಿಜರೂಪ ಬಂತು. ನಡೆದುಹೋದುದಕ್ಕಾಗಿ ನಾರದನು ನಾಚಿ, ವಿಷ್ಣುವಿನಲ್ಲಿ ಕ್ಷಮೆ ಕೇಳಿಕೊಂಡನು.

## ಕರ್ಣನಿಗೆ ಪರಶುರಾಮನ ಶಾಪ

ಮಹಾಭಾರತ ಕಾಲದಲ್ಲಿ ಜಾತಿಸೂಚಕ ವಿದ್ಯಾಸಂಸ್ಥೆಗಳು ಹೆಚ್ಚು ಪ್ರಚಾರದಲ್ಲಿದ್ದವು. ಶೂದ್ರರಿಗೆ ವಿದ್ಯೆಯ ಸೌಲಭ್ಯವಿರಲಿಲ್ಲ. ಪರಶುರಾಮನ ಆಶ್ರಮದಲ್ಲಿ



ಬರೀ ಬ್ರಾಹ್ಮಣರಿಗೆ ಅಧ್ಯಯನ ಮೀಸಲಾಗಿತ್ತು. ಸೂತ ಕುಲದಲ್ಲಿ ಜನಿಸಿದ ಕರ್ಣನಿಗೆ ಶಸ್ತ್ರವಿದ್ಯೆಯನ್ನು ಕಲಿಯುವ ಹಂಬಲ ಹೆಚ್ಚಾಗಿತ್ತು; ಆದರೆ ಪ್ರವೇಶ ಮಾತ್ರ ಎಲ್ಲಿಯೂ ಸಿಗಲಿಲ್ಲ. ಕರ್ಣನು ಬ್ರಾಹ್ಮಣ ವೇಷಧರಿಸಿ ಪರಶುರಾಮನಲ್ಲಿ ವಿದ್ಯಾಭ್ಯಾಸ ಮಾಡಿ, ಶಸ್ತ್ರಶಾಸ್ತ್ರವನ್ನು ಸಂಪೂರ್ಣ ಮುಗಿಸಿಕೊಂಡನು. ಕರ್ಣನ ಗುರುಭಕ್ತಿ ಅನುಪಮವಾದುದು. ಒಮ್ಮೆ ಪರಶುರಾಮನು ಶಿಷ್ಯನಾದ ಕರ್ಣನ ತೊಡೆಯ ಮೇಲೆ ತಲೆಯಿಟ್ಟು ನಿದ್ದೆ ಹೋದನು. ಆಗ ಕೀಟವೊಂದು ಕರ್ಣನ ತೊಡೆಯಲ್ಲಿ ಪ್ರವೇಶಿಸಿ ಕಡಿಯತೊಡಗಿತು. ಗುರುವಿಗೆ ನಿದ್ರಾಭಂಗವಾಗಬಾರದೆಂದು ಜುಪ್ಪೆನ್ನದೆ ಸೈರಿಸಿಕೊಂಡನು. ತೊಡೆಯಿಂದ ನೆತ್ತರು ಧಾರಾಕಾರವಾಗಿ ಸುರಿಯತೊಡಗಿತು. ನೆತ್ತರ ಸ್ನಾನವಾದಾಗಲೇ ಪರಶುರಾಮನಿಗೆ ಎಚ್ಚರ! ಇಷ್ಟೊಂದು ರಕ್ತ ಸುರಿಯುತ್ತಿದ್ದರೂ ಸಹಿಸಿಕೊಂಡ ಕರ್ಣ ಕ್ಷತ್ರಿಯನಿರಬೇಕೆಂದೇ ಗುರುವಿನ ತರ್ಕ. ಅದೇ ನಿಶ್ಚಯವೆನಿಸಿತು ಆ ಮಹಾನುಭಾವನಿಗೆ. ಕರ್ಣನು ಬ್ರಾಹ್ಮಣನೆಂದು ಹೇಳಿ ಹೆಸರು ಹಚ್ಚಿರಬೇಕೆಂದು ನಂಬಿ ಆತನಿಗೆ ಶಾಪ ಕೊಟ್ಟುಬಿಟ್ಟರು. ಅದರಿಂದಾಗಿ ವಿಪತ್ಕಾಲದಲ್ಲಿ ಕರ್ಣ ಎಂತಹ ಅಮೋಘ ಅಸ್ತ್ರವನ್ನು ತೊಟ್ಟರೂ ಆತನ ದೇಹ ಕಂಪಿಸುತ್ತ ನಡೆಯಿತು; ಇಟ್ಟ ಗುರಿ ತಪ್ಪುತ್ತ ನಡೆಯಿತು. ಕರ್ಣನ ಅಳಿಗಾಲಕ್ಕೆ ಅದೂ ಒಂದು ಕಾರಣವೆಂದು ತಿಳಿದವರು ನಂಬುವರು.

## ದಾನಶೂರ ಶಿಬಿಚಕ್ರವರ್ತಿ

ಶಿಬಿಚಕ್ರವರ್ತಿಯು ಸತ್ಯಸಂಧನಾಗಿ, ಧರ್ಮವೀರನಾಗಿ, ದಾನಶೂರನಾಗಿ ಮೆರೆದ ಮಹಾವೀರ. ಆತನು ಒಮ್ಮೆ ಯಜ್ಞ ಮಾಡುತ್ತಿದ್ದಾಗ ಇಂದ್ರ ಮತ್ತು ಅಗ್ನಿ ಈರ್ವರೂ ಕೂಡಿಕೊಂಡು ಗಿಡಗ ಮತ್ತು ಪಾರಿವಾಳದ ರೂಪಧರಿಸಿ ಶಿಬಿಚಕ್ರವರ್ತಿಯನ್ನು ಪರೀಕ್ಷಿಸಲು ಬಂದರು. ಪಾರಿವಾಳವನ್ನು ಗಿಡಗ ಬೆನ್ನು ಹತ್ತಿ ತಿರುವಲು, ಪಾರಿವಾಳವು ಪ್ರಾಣದಾಸೆಯಿಂದ ಶಿಬಿಯ ಬೆನ್ನಿಗೆ ಬಿದ್ದಿತು. ಬೆನ್ನಿಗೆ ಬಿದ್ದವರನ್ನು ಕಾಪಾಡುವುದೇ ಕ್ಷತ್ರಿಯ ಧರ್ಮವಲ್ಲವೇ? ಪಕ್ಷಿಯನ್ನು ತನಗೆ ಕೊಡಬೇಕೆಂದು ಹಟ ಹಿಡಿಯಲು ಶಿಬಿಚಕ್ರವರ್ತಿ ಆ ಪಕ್ಷಿಯನ್ನು ಕೊಡದೆ ಅದರ ತೂಕದಷ್ಟು ಮಾಂಸವನ್ನು ತನ್ನ ತೊಡೆಯಿಂದ ಕತ್ತರಿಸಿ ಕೊಡುವದಾಗಿ ಹೇಳಿದನು. ಪಕ್ಷಿಯ ತೂಕಕ್ಕೆ ಸರಿಯಾಗಿ ಮಾಂಸ ಸಾಲದಾಯಿತು. ರಾಜನು ಪರಡಿಯಲ್ಲಿ ತಾನೇ ಕುಳಿತು ಗರುಡನಿಗೆ ತನ್ನನ್ನೇ ಅರ್ಪಿಸಿದನು. ಆಗ ಇಂದ್ರ ಮತ್ತು ಅಗ್ನಿ ನಿಜರೂಪವನ್ನು ತೋರಿ ಶಿಬಿಚಕ್ರವರ್ತಿಗೆ ಮೋಕ್ಷವನ್ನು ದಯಪಾಲಿಸಿದರು. ಅಂದಿನಿಂದ ಶಿಬಿ ದಾನಶೂರನೆಂದು ಖ್ಯಾತಿಪಡೆದನು.

## ರಾಹುವಿನ ಶಿರ ಹಾರಿದುದು

ಒಂದು ಕಡೆ ದಾನವರೂ ಇನ್ನೊಂದು ಕಡೆ ದೇವತೆಗಳೂ ಸೇರಿ ಮೇರುಪರ್ವತವನ್ನು ಕಡೆಗೋಲನ್ನಾಗಿ ಮಾಡಿ, ಆದಿಶೇಷನನ್ನು ಹಗ್ಗವಾಗಿ ಹಿಡಿದು ಕ್ಷೀರಸಾಗರವನ್ನು ಮಥನ ಮಾಡಿದರು. ಆಗ ಅಮೃತ ಮೊದಲಾದ ಹದಿನಾಲ್ಕು ಅಮೂಲ್ಯವಸ್ತುಗಳು ಜನಿಸಿದವು. ಅಮೃತ ನಮಗೆ ಬೇಕು, ತಮಗೆ ಬೇಕು– ಎಂದು ವಾದವಿವಾದ ನಡೆಯಿತು. ಅದನ್ನು ದಾನವರು ಜೋರಿನಿಂದ ಸೆಳೆದುಕೊಂಡು ಬಚ್ಚಿಟ್ಟರು. ಇದನ್ನು ತಿಳಿದು ಲೋಕರಕ್ಷಕನಾದ ವಿಷ್ಣುವು ಮೋಹಿನೀ ವೇಷಧರಿಸಿಕೊಂಡು ಬಂದು, ತನ್ನ ವಿಭ್ರಮ ವಿಲಾಸದಿಂದ ದೇವದಾನವರನ್ನು ಸಮಾಧಾನ ಪಡಿಸಿ, ಸರಿಯಾದ ರೀತಿಯಲ್ಲಿ ಅಮೃತ ಹಂಚುವುದಾಗಿ ತಿಳಿಸಿದನು.

ಇಷ್ಟರಲ್ಲಿಯೆ ರಾಹು ಇದೇ ಸುಸಂಧಿಯೆಂದು ಭಾವಿಸಿ, ದೇವತೆಯ ವೇಷದಲ್ಲಿ ಬಂದು ಅಮೃತ ಕುಡಿಯತೊಡಗಿದನು. ಸೂರ್ಯ ಚಂದ್ರರು ಈ ಗುಪ್ತವಿಷಯವನ್ನು ವಿಷ್ಣುವಿಗೆ ತಿಳಿಸಲು ಆತನು ತನ್ನ ಚಕ್ರಾಯುಧದಿಂದ ರಾಹುವಿನ ಶಿರವನ್ನು ಕತ್ತರಿಸಿ ಹಾಕಿದನು. ರಾಹು ಕುಡಿದ ಅಮೃತ ಇನ್ನೂ ಮುಂಡದಲ್ಲಿ ಸೇರಿದ್ದಿಲ್ಲ. ಅದನ್ನುಂಡ ಆತನ ರುಂಡ ಮಾತ್ರ ಅಮರವಾಗಿತ್ತು. ಅದೇ ಪೂರ್ವವೈರದಿಂದ ರಾಹು ಸೂರ್ಯ ಚಂದ್ರರನ್ನು ಕಾಡಿಸುತ್ತಲೇ ನಡೆದಿದ್ದಾನೆ.

## ಇಲ್ವಲ–ವಾತಾಪಿ

ಇವರೀರ್ವರೂ ಹಿರಣ್ಯಕಶ್ಯಪನ ಮೊಮ್ಮಕ್ಕಳು. ತಮ್ಮ ಪೂರ್ವವೈರವನ್ನು ಸಾಧಿಸುವುದಕ್ಕಾಗಿ ಅತಿಶಯ ಕಷ್ಟಪಟ್ಟು ಗುರುಶುಕ್ರಾಚಾರ್ಯರಿಂದ ಮೃತಸಂಜೀವನ ಮಂತ್ರೋಪದೇಶ ಪಡೆದರು. ಈ ಮಂತ್ರಬಲದಿಂದ ಅವರು ಲೋಕಕಂಟಕರಾಗುತ್ತ ನಡೆದರು. ಅವರು ಇಂದಿನ ಬದಾಮಿ ಪ್ರದೇಶದಲ್ಲಿ ಇದ್ದರೆಂದು ವಾಡಿಕೆ.

ಇಲ್ವಲನು ಮಹಾಚಾಣಾಕ್ಷ. ಪ್ರತಿಯೊಬ್ಬ ಬ್ರಾಹ್ಮಣನನ್ನು ರಮಿಸಿ ಕರೆಸಿ, ತನ್ನ ತಮ್ಮನಾದ ವಾತಾಪಿಯನ್ನು ಕುರಿಯನ್ನಾಗಿ ಮಾಡಿ ಕಡಿದು ಅವರಿಗೆ ಊಟ ಮಾಡಿಸುತ್ತಿದ್ದನು. ನಂತರ "ವಾತಾಪಿ ಹೊರಗೆ ಬಾ" ಎಂದು ಕರೆದೊಡನೆ ಅವರ ಹೊಟ್ಟೆಯಿಂದ ಆತ ಹೊರಗೆ ಬರಲು ಅವರು ಸಾಯುತ್ತಿದ್ದರು. ಸತ್ತ ಬ್ರಾಹ್ಮಣರನ್ನು ಹಿಂದುಗಡೆ ಇಬ್ಬರೂ ತಿಂದು ತೇಗುತ್ತಿದ್ದರು. ಒಮ್ಮೆ ಅಗಸ್ತ್ಯ ಋಷಿ ಅವರಿದ್ದಲ್ಲಿಗೆ ಬಂದ. ಅವನನ್ನೂ ತಿನ್ನುವ ಆಸೆ ಆ ಸಹೋದರರಿಗೆ. ಪದ್ಧತಿಯಂತೆ ಋಷಿಗೆ ಊಟ ಮಾಡಿಸಿ, ಇಲ್ವಲನು "ವಾತಾಪಿ ಹೊರಗೆ ಬಾ" ಎನ್ನುವಷ್ಟರಲ್ಲಿ ಇವರ ಕುಹಕ ಬುದ್ಧಿಯನ್ನು ಕಂಡ ಅಗಸ್ತ್ಯ ಮಂತ್ರಬಲದಿಂದ "ವಾತಾಪಿ ಜೀರ್ಣೋ ಭವ" ಎಂದನು. ಆತನಿಗೆ ಅಂಜಿ ಕ್ಷಮೆ ಕೇಳಿಕೊಂಡು ಇಲ್ವಲನು ಋಷಿಯನ್ನು ಬೀಳ್ಕೊಟ್ಟನು. ಮಾರ್ಗದಲ್ಲಿ ಹೋಗುವಾಗ ಇಲ್ವಲನು ಋಷಿಗೆ ಅಡ್ಡಗಟ್ಟಿ ಅವನನ್ನು ಕೊಲ್ಲಲು ಯತ್ನಿಸಿದ. ಋಷಿ ಅವನನ್ನೂ ಸುಟ್ಟು ಬೂದಿಮಾಡಿದನು. ಈ ವಿದ್ಯೆಯನ್ನು ಆ ದಾನವರಿಗೆ ನೀಡಿದ ಶುಕ್ರಾಚಾರ್ಯರಿಗೆ ಪಶ್ಚಾತ್ತಾಪವಾಯಿತು.

## ಜರತ್ಕಾರುವಿನ ಪಿತೃಭಕ್ತಿ

ಜರತ್ಕಾರು ಒಬ್ಬ ಮಹಾಬ್ರಹ್ಮಚಾರಿ. ಅವನ ತಂದೆ ಯಾಯಾರು. ಜರತ್ಕಾರು ಒಮ್ಮೆ ಅರಣ್ಯದಲ್ಲಿ ಸಂಚರಿಸುತ್ತಿದ್ದಾಗ ಒಂದು ಹಾಳು ಬಾವಿಯಲ್ಲಿ, ಕೆಲವರು ತಲೆ ಕೆಳಗಾಗಿ ಗಿಡಕ್ಕೆ ಜೋತಾಡುವದನ್ನು ಕಂಡನು. ಅವರು ಮಕ್ಕಳಿಂದ ಪಿತೃತರ್ಪಣವಿಲ್ಲದೆ ತ್ರಿಶಂಕು ಸ್ವರ್ಗದಲ್ಲಿದ್ದರು. ಜರತ್ಕಾರು ವಿಚಾರಮಾಡಲಾಗಿ ಅವರೇ ತನ್ನ ಪೂರ್ವದ ವಂಶಸ್ಥರೆಂಬುದು ತಿಳಿದುಬಂತು. ಅವರಿಗೆ ಸ್ವರ್ಗಲಾಭ ದೊರೆಯಬೇಕಾದರೆ ಜರತ್ಕಾರುವಿನ ಉದರದಲ್ಲಿ ಜನಿಸಿದವರು ಪಿಂಡವನ್ನು ನೀಡಬೇಕು. ಇದು ಹೇಗೆ ಸಾಧ್ಯ? ಜರತ್ಕಾರು ಕಟ್ಟಾ ಬ್ರಹ್ಮಚಾರಿ. ಮದುವೆಯಾಗಲು ಆತನಿಗೆ ಇಷ್ಟವಿಲ್ಲ. ತನ್ನಷ್ಟಕ್ಕೆ ತಾನೆ ಮದುವೆಯಾದರೆ ನೋಡೋಣ: ಪಿತೃಗಳಿಗಿಂತಲೂ ಹೆಚ್ಚಿನದು ಯಾವುದಿದೆ? ಎಂದುಕೊಂಡು ಮರಳಿ ಬಂದನು. ಕೆಲವು ಸಮಯ ಕಳೆಯಿತು, ಜರತ್ಕಾರು ಎನ್ನುವ ಒಬ್ಬ ಕನ್ಯೆ ತಾನಾಗಿಯೇ ಬಂದು ಮದುವೆಯಾಗಬೇಕೆಂದು ಪ್ರಾರ್ಥಿಸಿಕೊಂಡಳು. ಜರತ್ಕಾರು ಅವಳಿಗೆ ಒಂದು ಕಟ್ಟು ಹಾಕಿದನು; 'ನನ್ನ ಮಾತಿಗೆ ಮೀರಿ ನಡೆದಂದೆ ನನ್ನ ನಿನ್ನ ನಡುವೆ ಇರುವ ಬ್ರಹ್ಮಗಂಟು ಹರಿಯಿತೆಂದು ತಿಳಿ' ಎಂದು ಹೇಳಿ ಮದುವೆಯಾದನು. ಅವರ ಉದರದಲ್ಲಿ ಒಂದು ಮಗು ಜನಿಸಿತು; ಅವನೇ ಆಸ್ತಿಕ ಋಷಿ. ಆತನಿಂದ ಪಿತೃಗಳಿಗೆ ಪಿಂಡ ದೊರೆಯ ಹತ್ತಿ ಅವರಿಗೆ ಸ್ವರ್ಗಪದ ದೊರೆಯಿತು. ಜರತ್ಕಾರುವಿನ ಮಾತನ್ನು ಅವನ ಹೆಂಡತಿ ಒಮ್ಮೆ ಮೀರಿದಳು. ಅಂದೇ ಅವನು ದಿಕ್ಕುಪಾಲಾಗಿ ಹೊರಟು ಹೋದ; ಹೋದವನು ಮರಳಿ ಬರಲಿಲ್ಲ.

ಪುಷ್ಪದಂತನೊಬ್ಬ ಗಂಧರ್ವ ಪುರುಷ. ಒಮ್ಮೆ ಆತನು ತಿಲೋತ್ತಮೆ ಎಂಬ ಅಪ್ಸರೆಯನ್ನು ಕಾಮಾತುರನಾಗಿ ಪೀಡಿಸಿದನು. ಅವಳು ಸಿಟ್ಟಿಗೆದ್ದು ರಾಕ್ಷಸವೃತ್ತಿಯುಳ್ಳ ನೀನು ಮುಂದಿನ ಜನ್ಮದಲ್ಲಿ ರಾಕ್ಷಸನಾಗಿ ಹುಟ್ಟು ಎಂದು ಶಾಪವಿತ್ತಳು. ಅದರಂತೆ ಪುಷ್ಪದಂತನು ಮೂಕದಾನವನಾಗಿ ಜನ್ಮವೆತ್ತಿದನು. ಆತನಿಗೆ ಹಂದಿಯ ರೂಪ ದೊರೆಯಿತು. ಶಬರಶಂಕರವಿಳಾಸದ ಕಥೆಯಲ್ಲಿ ಹೇಳಿದಂತೆ ಶಬರವೇಷದಲ್ಲಿರುವ ಶಿವನು ಈ ಮೂಕದಾನವನನ್ನೇ ಹಂದಿಯನ್ನಾಗಿ ಮಾಡಿಕೊಂಡು ಅರ್ಜುನನು ತಪಶ್ಚರ್ಯಕ್ಕೆ ಕುಳಿತ ಇಂದ್ರಕೀಲ ಪರ್ವತಕ್ಕೆ ಬೇಟೆಗೆ ಬಂದನು. ಅರ್ಜುನ–ಶಿವ ಇಬ್ಬರೂ ಈ ಹಂದಿಯ ಮೇಲೆ ಬಾಣಪ್ರಯೋಗ ಮಾಡಿದರು. ಮೂಕದಾನವನಿಗೆ ಅಂದೇ ಮೋಕ್ಷವಾಯಿತು. ಪುಷ್ಪದಂತನಾಗಿ ಕೈಲಾಸಕ್ಕೆ ಹೋದನು.

## ಸೌಂದರ ನಂಬಿಯ ಕಥೆ

ಕೈಲಾಸದಲ್ಲಿ ಶಿವನ ಸೇವಕನಾಗಿದ್ದ ಸುಂದರನು ಶಿವಪೂಜೆಗಾಗಿ ಹೂತರಲು ಉದ್ಯಾನಕ್ಕೆ ಹೋದ. ಅಲ್ಲಿ ಪಾರ್ವತಿದೇವಿಯ ಚೇಟಿಯರಾಗಿದ್ದ ಕಮಲಿನಿ ಅನಿಂದೆಯರನ್ನು ಕಂಡು ಮೋಹಕ್ಕೊಳಗಾದನು. ಇದನ್ನು ತಿಳಿದ ಶಿವನು ಈ ಮೂವರನ್ನೂ ಕರೆಯಿಸಿ 'ನೀವು ಭೂಲೋಕದಲ್ಲಿ ಜನಿಸಿ ಸಂಸಾರದ ಸವಿಯನ್ನು ಸವೆದು ಮರಳಿ ಬನ್ನಿರಿ' ಎಂದು ತಿಳಿಸಿದನು. ಅವನ ಅಪ್ಪಣೆಯ ಪ್ರಕಾರ ಅವರು ಭೂಲೋಕಕ್ಕೆ ಬಂದು ನಿಂತರು.

ಸುಂದರನು ತಿರುನಾವಲೂರಿನ ಒಂದು ಶೈವವಂಶದಲ್ಲಿ ಹುಟ್ಟಿ ಸೌಂದರ ನಂಬಿಯೆಂದು ಪ್ರಸಿದ್ಧಿಪಡೆದನು. ಅವನ ತೇಜಸ್ಸಿಗೆ ಮಾರುಹೋದ ಆ ದೇಶದ ದೊರೆ ಆತನನ್ನು ಜೋಪಾನ ಮಾಡಿದನು. ನಂಬಿಗೆ ಯೌವನ ಬರಲು ರಾಜನು ಆತನ ಮದುವೆಯ ಸಿದ್ಧತೆಯನ್ನು ಮಾಡಿದನು. ಮದುವೆಯ ಚಪ್ಪರ ಸಿದ್ಧವಾಯಿತು. ಇನ್ನೇನು ಅಕ್ಷತೆ ಹಾಕುವದೊಂದೇ ಬಾಕಿ. ಆ ಸಮಯದಲ್ಲಿ ಶಿವನು ಮುದಿ ಬ್ರಾಹ್ಮಣನ ವೇಷವನ್ನು ಧರಿಸಿ ಮದುವೆಯ ಮಂಟಪಕ್ಕೆ ಬಂದನು. ಹಂದರದ ತುಂಬ ಹರಿದಾಡಿ, ಅಲ್ಲಿದ್ದ ಪದಾರ್ಥಗಳ ಮೇಲೆ ಬಿದ್ದುಯೆದ್ದು ಅಶುಭವನ್ನುಂಟು ಮಾಡಿದನು. ನಂಬಿ ತನ್ನ ಸೇವಕನೆಂದೂ ಅವನನ್ನು ತನ್ನ ಸೇವೆಗೆ ಕರೆದುಕೊಂಡು ಹೋಗುವದಾಗಿಯೂ ಹಟ ಹಿಡಿದನು. ಅದಕ್ಕಾಗಿ ನೊಂದಾಯಿಸಿದ್ದ ಕರಾರು ಪತ್ರವನ್ನು ತೋರಿಸಿದನು. ಇನ್ನೆಂತಹ ಸಾಕ್ಷಿ ಬೇಕು? ಅದನ್ನು ಓದಿದವರೆಲ್ಲರೂ ಆ ಶಿವಜಂಗಮನ ಹೇಳಿಕೆಯೇ ಸತ್ಯವೆಂದರು. ನಂಬಿಯಣ್ಣ ಉಪಾಯವಿಲ್ಲದೆ ಆತನ ಸೇವೆಗೈಯಲು ಸಿದ್ಧನಾದನು. ಶಿವಜಂಗಮನು ನಂಬಿಯನ್ನು ಒಂದು ದೇವಾಲಯದವರೆಗೆ ಕರೆದೊಯ್ದು ಅಲ್ಲಿಯೇ ಮಾಯವಾದನು. ನಂಬಿಗೆ ಜ್ಞಾನೋದಯುವಾಯಿತು. ಆತನು ಪರಮಾತ್ಮನನ್ನು ಏಕನಿಷ್ಠೆಯಿಂದ ಪೂಜಿಸತೊಡಗಲು ಶಿವನು ಪ್ರತ್ಯಕ್ಷನಾದನು. ನಂಬಿಯು ನಂಬಿ ಕರೆದಾಗ ಶಿವನು ಓಗೊಡತೊಡಗಿದನು.

ನಂಬಿಯೊಡನೆ ಭೂಲೋಕಕ್ಕೆ ಬಂದ ಕಮಲಿನಿಯು ಪರವೆಯೆಂಬ ಹೆಸರಿನಿಂದ ಅದೇ ಊರಲ್ಲಿಯೆ ಬೆಳೆದು ದೊಡ್ಡವಳಾಗಿದ್ದಳು. ಅನಿಂದೆಯು ಸಹ ನಾಯಿರು ಗ್ರಾಮದಲ್ಲಿದ್ದಳು. ಇವರೊಡನೆ ಕೆಲಕಾಲ ಸುಖದಿಂದ ಇದ್ದು ಸಂಸಾರಸುಖವನ್ನು ಸವಿದನು. ಕಾಲಾನಂತರ ಆ ಸವತಿ ಮಕ್ಕಳಲ್ಲಿ ಕಲಹ ಉದ್ಭವಿಸಿತು. ಅದರ ಪರಿಹಾರಕ್ಕಾಗಿ ಶಿವನೇ ಬಂದನು. ಅವರೆಲ್ಲರಿಗೂ ದರ್ಶನವಿತ್ತು ಮೋಕ್ಷ ನೀಡಿದನು. ಸೌಂದರ ನಂಬಿಯನ್ನು ಕುರಿತು ಬರೆದ ಸಾಹಿತ್ಯ ಕನ್ನಡದಲ್ಲಿ ಸಾಕಷ್ಟಿದೆ.



## ಶಿರಿಯಾಳನ ಶಿವಭಕ್ತಿ

ಕಾಂಚೀ ಪಟ್ಟಣದಲ್ಲಿ ಸಿರಿಯಾಳನೆಂಬ ಶಿವಭಕ್ತನಿದ್ದನು. ಅವನ ದಾಸೋಹ ಭಾವ ವರ್ಣಿಸಲು ಅಸದಳವಾಗಿತ್ತು. ಶಿವನು ಸಿರಿಯಾಳನನ್ನು ಪರೀಕ್ಷಿಸಲು ಭಿಕ್ಷುಕನ ವೇಷವನ್ನು ಧರಿಸಿ ಅವನಿದ್ದಲ್ಲಿಗೆ ಬಂದನು. ಸಿರಿಯಾಳನು ಆತನನ್ನು ಭಕ್ತಿಯಿಂದ ಬರಮಾಡಿಕೊಂಡು ಅತಿಥಿ ಸತ್ಕಾರಕ್ಕಾಗಿ ಸರ್ವಸಿದ್ಧತೆ ಮಾಡಿದನು. ಆಗ ಶಿವನು "ಶಿರಿಯಾಳ, ನನ್ನದೊಂದು ವ್ರತವಿದೆ. ಅದನ್ನು ನಡೆಯಿಸಿಕೊಟ್ಟರೆ ನಾನು ನಿನ್ನ ಆತಿಥ್ಯ ಸ್ವೀಕರಿಸುತ್ತೇನೆ; ಇಲ್ಲದಿದ್ದರೆ ಆತಿಥ್ಯವನ್ನೊಲ್ಲೆ" ಎಂದನು. ಸಿರಿಯಾಳನು ಅದಕ್ಕೊಪ್ಪಿದನು. "ಬಾಲಕನ ಮಾಂಸವನ್ನು ಬಿಟ್ಟು ಮತ್ತೇನನ್ನೂ ನಾವು ಸ್ವೀಕರಿಸುವುದಿಲ್ಲ; ಹಾಗೆ ಮಾಡಿದರೆ ನಾವು ತೃಪ್ತರಾಗಬಲ್ಲೆವು" ಎಂದು ಶಿವ ಹೇಳಿದರೆ ಸಿರಿಯಾಳನು ಪಿಟ್ಟೆನ್ನದೆ ಒಪ್ಪಿಬಿಟ್ಟನು. ಗಂಡಹೆಂಡಿರಿಬ್ಬರೂ ಕೂಡಿ ತಮ್ಮ ಮಗನನ್ನೇ ಕೊಲ್ಲಿಸಿ ಮಾಂಸದ ಅಡಿಗೆ ಮಾಡಿಸಿದರು. ಇನ್ನೇನು ಊಟಕ್ಕೆ ಕೂಡ್ರಬೇಕು. ಆಗ ಶಿವನು "ಮನೆಯ ದಂಪತಿಗಳು ನಮ್ಮೊಡನೆ ಊಟ ಮಾಡಬೇಕು: ಅದಕ್ಕಾಗಿ ನಿಮ್ಮ ಮಗನನ್ನು ಕರೆಯಿರಿ" ಎಂದನು. ಆಗ ಶಿರಿಯಾಳನು "ಇದ್ದೊಬ್ಬ ಮಗನು ನಿಮ್ಮ ಪ್ರಸಾದಕ್ಕೆ ಮೀಸಲಾದ; ಇನ್ನೊಬ್ಬನಿಲ್ಲ" ಎಂದನು. ಆಗ ಪರಮಾತ್ಮನು ಆ ದಂಪತಿಗಳ ಭಕ್ತಿಗೂ ಮನೋದಾರ್ಢ್ಯಕ್ಕೂ ಮೆಚ್ಚಿ, ಸತ್ತ ಮಗನನ್ನು ಬದುಕಿಸಿ ಕೊಟ್ಟದ್ದಲ್ಲದೆ ಅವರಿಗೆ ತನ್ನ ದರ್ಶನಲಾಭ ಒದಗಿಸಿದನು. ಆ ಶಿವಭಕ್ತರಿಗೆ ಶಿವ ಸಾಯುಜ್ಯ ದೊರೆಯಿತು.

## ದ್ರೌಪದಿಯ ಸತ್ವಪರೀಕ್ಷೆ

ಪಾಂಡವರು ವನವಾಸದಲ್ಲಿದ್ದಾಗ ಒಂದು ಘಟನೆ ನಡೆಯಿತು. ಭೀಮಸೇನನು ಬೇಟೆಯಾಡುತ್ತ ಕಣ್ವರ ಆಶ್ರಮಕ್ಕೆ ಬಂದನು. ಅಲ್ಲಿ ನೇರಿಲ ಮರವೊಂದರಲ್ಲಿ ಒಂದೇ ಹಣ್ಣಿದ್ದುದನ್ನು ಕಂಡು, ಅದನ್ನು ಹರಿದುಕೊಂಡು ಬಂದು ಧರ್ಮರಾಜನಿಗೆ ಒಪ್ಪಿಸಿದನು. ಆ ಹಣ್ಣು ಸರ್ವರ ಮನವನ್ನೂ ಸೆಳೆಯಿತು. ಅದನ್ನು ಕಂಡು ತ್ರಿಕಾಲ ಜ್ಞಾನಿಯಾದ ಸಹದೇವನು "ಅದು ಕಣ್ವರ ಆಶ್ರಮದಲ್ಲಿ ಬೆಳೆದ ಹಣ್ಣೆಂದೂ ಅದನ್ನು ಸೇವಿಸುತ್ತಲೇ ಕಣ್ವರು ತಪಶ್ಚರ್ಯ ಮುಂದುವರಿಸುವರೆಂದೂ ಹೇಳಿ, ಅದಿಲ್ಲದೆ ಅವರಿಗೆ ಆಹಾರವಿಲ್ಲ. ಆ ಹಣ್ಣನ್ನು ತಿರುಗಿ ಕಳಿಸಬೇಕು. ಮೊದಲಿದ್ದಂತೆ ನೇರಿಲ ಮರದ ತೊಟ್ಟಿಗೆ ಹತ್ತಿಸಬೇಕು. ಇಲ್ಲದಿದ್ದರೆ ಮುನಿಯ ಶಾಪ ಪಾಂಡವರಿಗೆ ತಪ್ಪಿದ್ದಲ್ಲ"ವೆಂದು ಹೇಳಿದನು. ಪಾಂಡವರಿಗೆ ಕಷ್ಟ ಬಂದಾಗ ಪರಿಹಾರ ನೀಡುವವನು ಶ್ರೀಕೃಷ್ಣನಲ್ಲವೆ?

ಶ್ರೀಕೃಷ್ಣ ಪರಮಾತ್ಮನು ಪಾಂಡವರನ್ನು ಕಣ್ವರ ನೇರಿಲ ಮರಕ್ಕೆ ಕರೆದೊಯ್ದು, ಹಣ್ಣನ್ನು ಮರದ ತೊಟ್ಟಿನ ಕೆಳಗಿಟ್ಟು, ಪಾಂಡವರಿಗೆ "ನಿಮ್ಮ ನಿಮ್ಮ ಮನಸ್ಸಿನ ನಿಶ್ಚಯವನ್ನು ನೆನೆಯಿರಿ; ಅದು ಸತ್ಯಶುದ್ಧವಾಗಿದ್ದರೆ ಹಣ್ಣು ತೊಟ್ಟಿಗೆ ಸೇರುವುದು ನಿಶ್ಚಿತ" ಎಂದನು. ಪಾಂಡವರು ಪಾಳೆಯ ಪ್ರಕಾರ ಹಾಗೆಯೇ ಮಾಡಿದರು. ಹಣ್ಣು ಒಂದು ಮೊಳದಷ್ಟು ಮೇಲೆದ್ದು ನೆಲ ಹಿಡಿಯಿತು. ಆಗ ದ್ರೌಪದಿ ಮುಂದೆ ಬಂದು ತನ್ನ ಮನದ ಇಚ್ಛೆಯನ್ನು ಸರಿಯಾಗಿ ನೆನೆದಳು. ಹಣ್ಣು ತೊಟ್ಟಿಗೆ ಹತ್ತಿಕೊಂಡಿತು. ಇದನ್ನು ಸಮ್ಯಕ್‌ಜ್ಞಾನದಿಂದ ಅರಿತ ಕಣ್ವರು ಅಲ್ಲಿಗೆ ಬಂದು ಆ ಹಣ್ಣನ್ನು ಅಲ್ಲಿದ್ದವರಿಗೆಲ್ಲ ಹಂಚಿ ಸರ್ವರಿಗೂ ತೃಪ್ತಿಯನ್ನುಂಟುಮಾಡಿದರು.

### ಅಹಲ್ಯೆ ಕಲ್ಲಾದುದು

ಅಹಲ್ಯೆ ಗೌತಮ ಋಷಿಯ ಪತ್ನಿ. ಇಂದ್ರನು ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂದು ಬಯಸಿದನು. ಗೌತಮನು ಕೋಳಿ ಕೂಗುವ ಪೂರ್ವದಲ್ಲಿಯೇ ನದಿಯ ಸ್ನಾನಕ್ಕೆ ಹೋಗುವುದೊಂದು ರೂಢಿ. ಇದನ್ನರಿತ ಇಂದ್ರನು ಗೌತಮನ ವೇಷಧರಿಸಿ ಅಹಲ್ಯೆಯನ್ನು ಮೋಸಗೊಳಿಸಿದ. ಅಷ್ಟರಲ್ಲಿ ಗೌತಮನು ನದಿಯಿಂದ ಮರಳಿ ಮನೆಗೆ ಬಂದನು. ಇಂದ್ರನನ್ನು ತನ್ನ ಮನೆಯಲ್ಲಿಯೇ ಕಂಡು ಆತನಿಗೆ "ನಿನಗೆ ಸಹಸ್ರ ಕಣ್ಣಾಗಲಿ" ಎಂದು ಶಾಪವಿತ್ತನು. ಅಹಲ್ಯೆಗೂ ಕಲ್ಲಾಗೆಂದು ಶಪಿಸಿದನು. ಆತನು ಬೇರೆಡೆಗೆ ತಪಶ್ಚರ್ಯಕ್ಕಾಗಿ ಹೊರಟು ಹೋದನು. ಪತಿವ್ರತೆಯಾದ ಅಹಲ್ಯೆಯು ಎಷ್ಟೋ ಕಾಲದವರೆಗೆ ಕಲ್ಲಾಗಿಯೇ ಬಿದ್ದಿದ್ದು ಶ್ರೀರಾಮಚಂದ್ರನ ಪಾದಧೂಳಿಯಿಂದ ಪುನಃ ತನ್ನ ಮೂಲರೂಪ ಪಡೆದಳು. ಇಂದ್ರ ಮಾತ್ರ ಮೈಯೆಲ್ಲ ತೂತಾಗಿ ಇಂದಿಗೂ ಇದ್ದಾನೆ. ಅವನು ಅಮೃತವನ್ನುಂಡಿಲ್ಲವೆ?

### ಕಾಶೀರಾಜನ ಮಗಳು ಅಂಬೆ

ಕುರುವಂಶದಲ್ಲಿ ಶಂತನ ಮಹಾರಾಜನು ಮಹಾ ಪ್ರಭಾವಶಾಲಿ. ಆತನಿಗೆ ಗಂಗಾದೇವಿ, ಸತ್ಯವತಿ ಎಂಬ ಈರ್ವರು ಹೆಂಡಂದಿರಾದರು. ಗಂಗಾದೇವಿಯ ಉದರದಲ್ಲಿ ಭೀಷ್ಮನು ಹುಟ್ಟಿದನು. ಸತ್ಯವತಿಗೆ ಚಿತ್ರಾಂಗದ ಮತ್ತು ವಿಚಿತ್ರವೀರ್ಯ ಎಂಬ ಇಬ್ಬರು ಮಕ್ಕಳಾದರು. ಭೀಷ್ಮನ ಹೆಸರು ದೇವವ್ರತ ಎಂದಿತ್ತು. ಆದರೆ ಆ ಜನ್ಮ ಪರಿಯಂತ ಬ್ರಹ್ಮಚಾರಿಯಾಗಿರುವೆನೆಂದು ಪ್ರತಿಜ್ಞೆ ಮಾಡಿದ್ದರಿಂದ ಅವನನ್ನು ಭೀಷ್ಮ ಎಂದು ಕರೆಯಲಾರಂಭಿಸಿದರು. ಚಿತ್ರಾಂಗದನು ಚಿಕ್ಕವನಿರುವಾಗಲೇ ರಣಾಂಗಣದಲ್ಲಿ ಕಾದಿ ಮಡಿದನು. ಉಳಿದ ವಿಚಿತ್ರವೀರ್ಯನಿಗೆ ಮದುವೆ ಮಾಡಿಸಬೇಕೆಂದು ಭೀಷ್ಮನು ಆತನನ್ನು ಕಾಶೀರಾಜನಲ್ಲಿಗೆ ಕರೆದುಕೊಂಡು ಹೋದನು.



ಕಾಶೀರಾಜನಿಗೆ ಅಂಬೆ, ಅಂಬಿಕೆ, ಅಂಬಾಲಿಕೆ ಎಂಬ ಮೂವರು ಹೆಣ್ಣುಮಕ್ಕಳು. ಪಣವನ್ನು ಗೆದ್ದು ಭೀಷ್ಮನು ಆ ಮೂವರನ್ನೂ ತನ್ನ ವಶಕ್ಕೆ ತೆಗೆದುಕೊಂಡ. ಅಂಬೆ ಈ ಮೊದಲೇ ಸಾಲ್ವರಾಜನ ಮೇಲೆ ಮನಸ್ಸಿಟ್ಟಿದ್ದರಿಂದ ಅವಳನ್ನು ಆತನಲ್ಲಿಗೆ ಭೀಷ್ಮ ಕಳಿಸಿದನು. ಆತ ಮದುವೆಗೆ ಒಪ್ಪಲಿಲ್ಲ. ಆಗ ಅಂಬೆ ಭೀಷ್ಮನನ್ನೇ ವರಿಸುವದಾಗಿ ಪಣತೊಟ್ಟಳು. ಬ್ರಹ್ಮಚಾರಿಯಾದ ಭೀಷ್ಮ ಮದುವೆಗೆ ಒಪ್ಪಲಿಲ್ಲ. ಅಂಬೆಗೆ ಸಿಟ್ಟು ಬಂತು; ಅವಳು ಪರಶುರಾಮನಲ್ಲಿಗೆ ಹೋಗಿ ಭೀಷ್ಮನ ಅನ್ಯಾಯವನ್ನು ಶ್ರುತಪಡಿಸಿದಳು. ಪರಶುರಾಮನು ಭೀಷ್ಮನಿಗೆ ತಿಳಿಹೇಳಿದರೂ ಆತ ಒಪ್ಪಲಿಲ್ಲ. ಮಾತಿಗೆ ಮಾತು ಬೆಳೆದು ಅವರಿಬ್ಬರ ನಡುವೆ ಯುದ್ಧವಾಯಿತು. ಇಬ್ಬರೂ ಸೋಲಲಿಲ್ಲ; ಯಾರೂ ಗೆದೆಯಲಿಲ್ಲ. ತೀರ್ಮಾನವಿಲ್ಲದೆ ಹೋದಾಗ ಅಂಬೆ ಮುಂದಿನ ಜನ್ಮದಲ್ಲಿ ಭೀಷ್ಮನ ಮೇಲಿನ ಸೇಡು ತೀರಿಸಿಕೊಳ್ಳುವೆನೆಂದು ಪ್ರತಿಜ್ಞೆ ಮಾಡಿ ಅಗ್ನಿಪ್ರವೇಶ ಮಾಡಿದಳು. ಆ ಮೇಲೆ ದ್ರುಪದರಾಜನ ಉದರದಲ್ಲಿ ಶಿಖಂಡಿಯ ನಾಮಧರಿಸಿ ಜನಿಸಿದಳು. ಭೀಷ್ಮ ಮತ್ತು ಅರ್ಜುನ ಮಹಾಭಾರತ ಯುದ್ಧದಲ್ಲಿ ಹೋರಾಡುತ್ತಿದ್ದಾಗ ಅವಳು ಅರ್ಜುನನ ಪಕ್ಷವಹಿಸಿ ಭೀಷ್ಮನನ್ನು ಬಾಣದಿಂದ ಕೊಂದಳು. ಅವಳ ಪ್ರತಿಜ್ಞೆ ಆಗ ಈಡೇರಿತು.

### ಷಟ್ಪುರೇಶನ ಮರಣ

ಷಟ್ಪುರಾಧಿಪತಿಯೆನಿಸಿಕೊಂಡವನು ನಿಕುಂಭನೆಂಬ ರಾಕ್ಷಸ. ಆತನು ಮಹಾಮಾಯಾವಿಯಾಗಿದ್ದ. ಒಮ್ಮೆ ಅರ್ಜುನನು ತನ್ನ ರಾಣೀ ಸಮೂಹದೊಡನೆ ಸಮುದ್ರ ತೀರದಲ್ಲಿ ಜಲಕ್ರೀಡೆಯಾಡಬೇಕೆಂದು ಬಂದ. ಅಷ್ಟರಲ್ಲಿ ಕೃಷ್ಣನೂ ಬಂದು ಅವರನ್ನು ಕೂಡಿಕೊಂಡ. ಸರ್ವರೂ ಸಂಭ್ರಮದಿಂದ ಸಮುದ್ರದಲ್ಲಿ ಈಜುತ್ತಿದ್ದಾಗ ನಿಕುಂಭನು ಸಮುದ್ರ ತಳದಲ್ಲಿ ಕುಳಿತುಕೊಂಡು ಭಾನುಮತಿಯನ್ನು ಜಪ್ಪಿಸಿ ಹಿಡಿದುಕೊಂಡು ಹೋದನು. ಆಗ ಅರ್ಜುನ ಅವನ ಬೆನ್ನುಹತ್ತಿ ಬಾಣಗಳ ಸುರಿಮಳೆಯನ್ನೇ ಕರೆದನು. ಎಲ್ಲದೂ ವ್ಯರ್ಥವೆನಿಸಿತು. ಆಗ ನಿಕುಂಭನು ಭಾನುಮತಿಯನ್ನು ಬಿಟ್ಟು ಅರ್ಜುನನನ್ನೇ ಕೈಯಲ್ಲಿ ಎತ್ತಿಕೊಂಡು ಆಕಾಶಕ್ಕೆ ಹಾರಿದನು. ಇದನ್ನು ಕಂಡ ಶ್ರೀಕೃಷ್ಣನು ಬಾಣತೊಟ್ಟನು. ಆ ಮಾಯಾವಿಯ ನಿಜಶರೀರವೇ ಕಾಣದಾಯಿತು. ಆತನು ಪಾರ್ಥನನ್ನು ಕೈಬಿಟ್ಟು ಯುದ್ಧ ಪ್ರಾರಂಭಿಸಿದನು. ಘನವಾದ ಕಾಳಗ ನಡೆದ ನಂತರ ಶ್ರೀಕೃಷ್ಣನು ಆ ದೈತ್ಯನನ್ನು ತನ್ನ ಚಕ್ರದಿಂದ ಸಂಹರಿಸಿದನು.

### ಶಿವನ ಪಂಚವಿಂಶತಿ ಲೀಲೆಗಳು

| | |
|---|---|
| ೧. ಸೋಮಧರಲೀಲೆ | ೪. ತಾಂಡವಲೀಲೆ |
| ೨. ಉಮಾಮಹೇಶ್ವರಲೀಲೆ | ೫. ಗಿರಿಜಾ ಕಲ್ಯಾಣಲೀಲೆ |
| ೩. ವೃಷಭಾರೂಢಲೀಲೆ(ವೃಷಭವಾಹನಲೀಲೆ) | ೬. ಭಿಕ್ಷಾಟನ ಲೀಲೆ |

೭. ಮಾರಹರಲೀಲೆ(ಕಾಮದಹನಲೀಲೆ)
೮. ಕಾಲಹರಲೀಲೆ
೯. ತ್ರಿಪುರದಹನಲೀಲೆ
೧೦. ಜಲಂಧರಲೀಲೆ
೧೧. ಅಜಾರಿಲೀಲೆ
೧೨. ವೀರಭದ್ರಲೀಲೆ(ದಕ್ಷಾಧ್ವರಲೀಲೆ)
೧೩. ಶರಭಲೀಲೆ
೧೪. ಅರ್ಧನಾರೀಶ್ವರಲೀಲೆ
೧೫. ಕಿರಾತಲೀಲೆ
೧೬. ಕಂಕಾಳಧರಲೀಲೆ
೧೭. ಚಂಡೇಶಾನುಗ್ರಹಲೀಲೆ
೧೮. ವಿಷಧರಲೀಲೆ
೧೯. ಚಕ್ರದಾನಲೀಲೆ
೨೦. ವಿಘ್ನಪ್ರಸಾದಲೀಲೆ
೨೧. ಉಮಾಸ್ಕಂದಲೀಲೆ
೨೨. ಏಕಪಾದಲೀಲೆ
೨೩. ಸುಖಾವಹಲೀಲೆ
೨೪. ದಕ್ಷಿಣಾಮೂರ್ತಿಲೀಲೆ
೨೫. ಲೀಗೋದ್ಭವಲೀಲೆ

❖❖



## ೩. ಪದ್ಯಗಳ ಅಕಾರಾದಿ

### ರಕ್ಷಾಶತಕ


| | |
|---|---|
| ಅತಿದೀನಂ ಧೂರ್ತಮಾನಂ | ೫೦ |
| ಅತುಳಸ್ವಚ್ಛಾಂಬುವಿಂ | ೬೪ |
| ಅದನಿನ್ನೇನೆಂಬೆನಾಹಾ | ೬೧ |
| ಅದನೇನೆಂಬೆಂ ಗುಣವ್ರಾತಮನೆ | ೧೦ |
| ಅದು ಸಂಸಾರಾಬ್ಧಿಯಂ | ೫೭ |
| ಅಪರಿಚ್ಛಿನ್ನಂ ಸ್ವತಂತ್ರಂ | ೮೫ |
| ಅಯ್ಯೋ ಸಂಸಾರಸಂಗ | ೨೫ |
| ಅಲರಿಂ ಕೂರ್ತಿಟ್ಟೊಡಂ | ೭೫ |
| ಅವನಿಂತಾರಾದೊಡಂ | ೨೦ |
| ಅವಿಚಾರಂ ಮಿಕ್ಕು | ೧೯ |
| ಅಳಿಪಂ ಸನ್ಮಾನಹೀನಂ | ೪೮ |
| ಆನೆಂತೆಂತಕ್ಕೆ ಬಂದೆಂ | ೪೩ |
| ಇದನೊಲ್ವೆಂ ದೈನ್ಯಮಂ | ೭೨ |
| ಇನಿತುಂ ತಾನಲ್ಲದಾರಂ | ೧೬ |
| ಇನಿತುಂ ವೈರಾಗ್ಯದತ್ತಲ್ | ೧೪ |
| ಉರಗಾಸ್ಯಾಲಗ್ನಭಗ್ನಪ್ರಚಲಿತ | ೨೬ |
| ಎಡೆಗೊಂಡೀ ಮುಪ್ಪುದೋಱಲ್ | ೩೮ |
| ಎನಗಾರ್ ದೈವಂ ವಿರೂಪಾಕ್ಷನೆ | ೮೦ |
| ಎನಗಿನ್ನೆಂತೆಂಬ ಚಿಂತಾಪ್ರತತಿ | ೬೨ |
| ಎನಸುಂ ಮತ್ತನ್ಯದೈವಕ್ಕೆಱಗದ | ೬೬ |
| ಎನ್ನಾನಂದಾಬ್ಧಿಯೇ | ೯೬ |
| ಎರವೀ ದೇಹಂ ಹಿರಣ್ಯಂ | ೩೨ |
| ಎರೆದೇವೆಂ ಪೊರ್ದಿಯೇವೆಂ | ೩೬ |
| ಎಸೆವೀ ಪಂಚಾಕ್ಷರೀ ಮಂತ್ರಮೆ | ೭೬ |
| ಏಕೆನ್ನಂ ನೋಡದಯ್ಯೋ | ೫೫ |
| ಏನೆಂಬೆಂ ಬಾಲ್ಯದೊಳ್ | ೪ |
| ಏಪೊಳ್ತುಂ ಗಾತ್ರಮಂ | ೭ |
| ಓರಂತೀ ದೇಹಮಂ ರಕ್ಷಿಸುವತಿ | ೧೮ |
| ಕನಕಂ ನೀರಕ್ಕರಂ ಪೆಂಡಿತಿ | ೩೧ |
| ಕರೆವಲ್ಲಿಂ ಮುನ್ನವೋ ಓ ಮಗನೆ | ೭೭ |
| ಕರ್ತಾರಂ ನೀನೆ | ೯೯ |
| ಕಿವಿಕಣ್ಗಳ್ ಕೆತ್ತು ಬಾಯೊರ್ಗುಡಿಸಿ | ೪೦ |
| ಖರರೂಪಂ ಪಾಪದೀಪಂ | ೫೧ |
| ಖಳನಂ ದುರ್ಬೋಧನಂ | ೪೭ |

| | |
|---|---|
| ಗಿರಿಶ ಶ್ರೀಕಂಠ ದಕ್ಷಾಧ್ವರಹರ | ೮೮ |
| ಗುರು ನೀಂ ತ್ವಚ್ಛಿಷ್ಯನಾಂ | ೪೬ |
| ಗುರುವಂ ನಂಬಿರ್ದು ಮತ್ತಾ | ೭೪ |
| ಗುರುವಿಂ ಸುದ್ಧಾತ್ಮನಾದೆಂ | ೯೫ |
| ಘನವೆನ್ನೊಳ್ ಮಾಣದೀ | ೫೨ |
| ಚದುರಿಂದಂ ವೇಷಮಂ | ೭೧ |
| ಜನನೀ ಗರ್ಭಾಂಡದಿಂ | ೪೨ |
| ಜಲಮಂ ಪೊರ್ದಿರ್ಪ | ೩೩ |
| ತನುವಂ ಸ್ತ್ರೀ ಪುತ್ರರಂ ರಕ್ಷಿಪ | ೨೧ |
| ತರದಿಂ ರೋಗಂ ವಿಷಂ | ೨೯ |
| ತವೆ ರೋಗಂ ಪತ್ತಿ ಗಾತ್ರಂ | ೩೭ |
| ತಳಿರಿಂ ಪೂವಿಂ ಫಲವ್ರಾತದಿ | ೬೩ |
| ತಿರುಗುತ್ತೆಂಬತ್ತುನಾಲ್ಕುಂ | ೨ |
| ತೆಱಪಿಲ್ಲಂ ಸಾವು | ೩೯ |
| ತೊಳಗುತ್ತಿರ್ಪರ್ಕನಿಂದಾಗಸವೆ | ೯೪ |
| ತೋಱುತ್ತಿರ್ಪೀ ಜಗಂ | ೯೩ |
| ದೇವಾ ನಾನೇವೆನೆಂದೆಂ | ೪೧ |
